# ಕನಕದಾಸರ ಲೋಕದೃಷ್ಟಿ

ಡಾ.ನೆಲ್ಲಿಕಟ್ಟೆ ಎಸ್. ಸಿದ್ದೇಶ್

ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾನಿಲಯ

ಜ್ಞಾನಸಹ್ಯಾದ್ರಿ, ಶಂಕರಘಟ್ಟ

**Kanakadasara Lokadrushti**
written By **Dr.Nellikatte S.Siddesh**,
Assistant Professor. Kannadabharati,
Kuvempu University, Jnanasahyadri,
Shankaraghatta, Shimogga:Dist-:phon:9481416989
Published by Director, prasaranga,
Kuvempu University, Jnanasahyadri,
Shankaraghatta, Shimogga:Dist-577451
First Edition:2012
(C): Kuvempu University

ಕನಕದಾಸರ ಲೋಕದೃಷ್ಟಿ-ಡಾ.ನೆಲ್ಲಿಕಟ್ಟೆ ಎಸ್.ಸಿದ್ದೇಶ್

ಸಹಾಯಕಪ್ರಾಧ್ಯಾಪಕರು, ಕನ್ನಡಭಾರತಿ, ಕುವೆಂಪು ವಿಶ್ವವಿದ್ಯಾನಿಲಯ,

ಜ್ಞಾನಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ:ಜಿ. ಜಂಗಮವಾಣಿ:9481416989

ಪ್ರಕಾಶಕರು:ನಿರ್ದೇಶಕರು, ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.

ಪ್ರಥಮ ಮುದ್ರಣ :2012,

ಗ್ರಂಥಸ್ವಾಮ್ಯದ ಹಕ್ಕು : ಕುವೆಂಪು ವಿಶ್ವವಿದ್ಯಾನಿಲಯ,

**ಲೇಖಕರ ನುಡಿ**

ಕುವೆಂಪು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಶಿವನಿ ಗ್ರಾಮದಲ್ಲಿ ದಿನಾಂಕ:03–10–2011ರಂದು ಏರ್ಪಡಿಸಿದ ಅರಿವು ವಿಸ್ತರಣಾ ಉಪನ್ಯಾಸ ಮಾಲಿಕೆಯಲ್ಲಿ ನಾನು ಮಾತನಾಡಿದ ವಿಸ್ತೃತ ರೂಪವಿದು. ಭಕ್ತಕವಿ ಸಂತ ಕನಕದಾಸರ ಬದುಕು ಬರಹ ಅಧ್ಯಯನವು ತನು ಮನವನ್ನು ಪ್ರಖರಗೊಳಿಸುವ ಆದಮ್ಯ ಶಕ್ತಿಯನ್ನು ಅಡಗಿಸಿಕೊಂಡಿರುವಂತಹದ್ದು.

ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ಅಸಮಾನತೆಯ ಅನುಭವದೊಂದಿಗೆ ಅರಳಿ, ಸವಿಯನ್ನು ಸರ್ವರಿಗೂ ಹಂಚಿದ ಮಹಾಪುರುಷ ಕನಕದಾಸರು. ಅವರ ಬದುಕು–ಬರಹದ ಮನನಕ್ಕೆ ಮತ್ತು ಅದರ ನಿವೇದನೆಗೆ ಅವಕಾಶ ನೀಡಿ, ಈ ಪುಸ್ತಕವನ್ನು ಪ್ರಕಟಿಸುತ್ತಿರುವ ವಿಶ್ವವಿದ್ಯಾನಿಲಯದ ಕುಲಪತಿ, ಕುಲಸಚಿವರು, ಪ್ರಸಾರಾಂಗದ ನಿರ್ದೇಶಕರಾದ ಡಾ.ಜಿ. ಪ್ರಶಾಂತನಾಯಕ, ಉಪನಿರ್ದೇಶಕರಾದ ಡಾ.ಶಿವಾನಂದಕೆಳಗಿನಮನಿ, ಸಹನಿರ್ದೇಶಕರಾದ ಡಾ.ಕುಮಾರಸ್ವಾಮಿ ಅವರಿಗೆ,

ಗುರುಗಳಾದ ಡಾ. ಕುಮಾರಚಲ್ಯ, ಡಾ. ಬಸವರಾಜನೆಲ್ಲಿಸರ, ಡಾ. ಸಣ್ಣರಾಮ, ಡಾ. ಕೇಶವಶರ್ಮ ಸರ್ ಅವರಿಗೆ,

ನನ್ನ ಓದು–ಬರಹ–ಭಾಷಣಗಳಿಗೆ ಪ್ರೇರಕ ಶಕ್ತಿಯಾದ ಅವ್ವ ಮಾರಕ್ಕ, ಅಕ್ಕ ಸಣ್ಣತಿಮ್ಮಕ್ಕ, ಮಡದಿ ಎಸ್.ಡಿ.ನಾಗರತ್ನ ಮಕ್ಕಳಾದ ಎನ್.ಎಸ್. ಬೆಳಗುಶ್ರೀ, ಎನ್.ಎಸ್. ಸೇಚನಶ್ರೀ ಇವರಿಗೆ ಕೃತಜ್ಞತೆಗಳು.

ದಿನಾಂಕ:05–07–2102

ಡಾ. ನೆಲ್ಲಿಕಟ್ಟೆ ಎಸ್.ಸಿದ್ದೇಶ್

ಸಹಾಯಕಪ್ರಾಧ್ಯಾಪಕರು,

ಕನ್ನಡಭಾರತಿ,

ಕುವೆಂಪು ವಿಶ್ವವಿದ್ಯಾನಿಲಯ,

ಜ್ಞಾನಸಹ್ಯಾದ್ರಿ, ಶಂಕರಘಟ್ಟ

## ಪರಿವಿಡಿ


ಅಧ್ಯಾಯ–1 ಪೀಠಿಕೆ

ಅಧ್ಯಾಯ–೨ ಕನಕದಾಸರ ಜೀವನ ಮತ್ತು ಸಾಧನೆ

ಅಧ್ಯಾಯ–೩ ಲೋಕದೃಷ್ಟಿ: ಅರ್ಥ ಮತ್ತು ಸ್ವರೂಪ

ಅಧ್ಯಾಯ–4 ಕನಕದಾಸರ ಲೋಕದೃಷ್ಟಿ

ಅಧ್ಯಾಯ–5 ಉಪಸಂಹಾರ

ಆಧಾರ ಗ್ರಂಥಗಳು:

# ಅಧ್ಯಾಯ–1

## ಪೀಠಿಕೆ:

'ಲಂಚದ ಆರೋಪ ಸಾಬೀತು: ನಾಲ್ವರು ಜೈಲು', ಮಗನಿಂದಲೇ ತಾಯಿಯ ಹತ್ಯೆ', 'ಗರ್ಭಪಾತ ಮಾಡಿಸಿದ ಪತಿಗೆ ಐದು ವರ್ಷ ಜೈಲು ಶಿಕ್ಷೆ', 'ನಾಲ್ಕು ಮಕ್ಕಳೊಂದಿಗೆ ತಾಯಿ ಆತ್ಮಹತ್ಯೆ', 'ಜೈಲಿಗೆ ಹೋಗಲು ಸಚಿವರ ಪೈಪೋಟಿ', 'ಜೀತದಾಳಿಗೆ ಜಮೀನ್ದಾರನ ಕಿರುಕುಳ', 'ಅಪ್ರಾಪ್ತ ಬಾಲಕಿ ಮೇಲೆ 20ದಿನ ಅತ್ಯಾಚಾರ', 'ತಂದೆ ಕೊಲೆಗೈದ ಮಗನಿಗೆ ಜೀವಾವಧಿ ಶಿಕ್ಷೆ', 'ತಂದೆಯಿಂದ ಬೆದರಿಕೆ: ರಕ್ಷಣೆಗಾಗಿ ಮಕ್ಕಳಿಬ್ಬರ ಮೊರೆ', 'ಭಗ್ನ ಪ್ರೇಮ: ನರ್ಸಿಂಗ್ ವಿದ್ಯಾರ್ಥಿ ಆತ್ಮಹತ್ಯೆ'– ಈ ತೆರನಾದ ಸಾವಿರಾರು ಸುದ್ದಿಗಳನ್ನು ಪತ್ರಿಕೆ, ರೇಡಿಯೋ, ದೂರದರ್ಶನ ಮೊದಲಾದ ಮಾಧ್ಯಮಗಳ ಮೂಲಕ ಗ್ರಹಿಸುತ್ತೇವೆ. ಆ ಒಂದು ಕ್ಷಣ ತಲ್ಲಣಿಸುತ್ತೇವೆ. ಇವುಗಳೆಲ್ಲ ಈವೊತ್ತಿನ ಮಾನವ ಮತಿಯ ಮಾಲಿನ್ಯಕ್ಕೆ ಸಾಕ್ಷಿಯಾಗಿವೆ. ದುರ್ಗುಣಗಳು, ದುರ್ವರ್ತನೆಗಳು, ದುಶ್ಚಟಗಳು ಆರ್ಭಟಿಸುತ್ತಿವೆ. ಇಂತಹ ಆರ್ಭಟಗಳನ್ನು ಅಡಗಿಸಲು, ಅವುಗಳ ದುಷ್ಟಶಕ್ತಿಯನ್ನು ಕರಗಿಸಲು ಇರುವ ಶಕ್ತಿಯೆಂದರೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯ ಅಧ್ಯಯನ.

ಮಾನವನನ್ನು ಮಹಾವ್ಯಕ್ತಿ–ಶಕ್ತಿಯಾಗಿ ನಿರ್ಮಿಸುವುದು ಅವನಲ್ಲಿ ಅಂತರ್ಗತವಾಗಿದ್ದ ಮಾನವೀಯತೆ ಮಾತ್ರ. ಇದು ಇಲ್ಲದ ಮೇಲೆ ಮಾನವನಾಗಲಾರ. ಅವನಲ್ಲಿ ಅನುವಂಶೀಯತೆ ಮತ್ತು ಪರಿಸರದ ಪ್ರಭಾವ ದುಷ್ಟ ಆಲೋಚನೆ, ಕ್ರಿಯೆಗಳು ವಿಜೃಂಭಿಸುವ ತಾಕಲಾಟದಲ್ಲಿದ್ದಾಗ ಸರಿದಾರಿಯನ್ನು ಸೂಚಿಸಿ ಸತ್‌ಶಕ್ತಿಯಾಗಿ ಪರಿವರ್ತಿಸುವ ಶಕ್ತಿ ಸಾಹಿತ್ಯಕ್ಕಿದೆ. ಮಾನವೀಯತೆಯನ್ನು ಪ್ರತಿಪಾದಿಸುವ ಸಾಹಿತ್ಯ ವ್ಯಷ್ಟಿ ಮತ್ತು ಸಮಷ್ಟಿಯನ್ನು ಅರಳಿಸುತ್ತದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಸುಗಂಧವಾಗಿ, ಮಲ್ಲಿಗೆಯ ಕಂಪಾಗಿರುವಂತಹ ಮಾನವಪರ, ಜೀವಪರ, ಸಮಾಜಮುಖಿ ಚಿಂತನೆಗಳನ್ನೇ ಕೇಂದ್ರವಾಗಿಸಿಕೊಂಡಿರುವ ಸಾಹಿತ್ಯದ ಅಧ್ಯಯನ ವ್ಯಕ್ತಿ–ವ್ಯಕ್ತಿಯ ನಡುವೆ, ವ್ಯಕ್ತಿ–ಪ್ರಕೃತಿಯ ನಡುವೆ, ವ್ಯಕ್ತಿ–ಸಮಾಜದ ನಡುವೆ ಮಧುರ ಬಾಂಧವ್ಯಗಳನ್ನು ಬೆಸೆಯುತ್ತ ಮನುಷ್ಯ ಸಂಬಂಧಗಳನ್ನು ಗಟ್ಟಿಗೊಳಿಸುತ್ತದೆ.

ಮಲಿನಗೊಂಡ ಮತಿಯಿಂದ ನಿರ್ಮಿತವಾದ ಮೇಲು–ಕೀಳೆಂಬ ವಿಷ ಬೀಜಗಳ ಬೆಳೆ, ಇಳೆಯ ಇರುವಿನಲ್ಲಿ ಕೊಳೆಯಾಗಿ ಹರಿಯುತ್ತದೆ. ಆ ಕೊಳೆಯ ದುಷ್ಪರಿಣಾಮಗಳ ಅರಿವನ್ನು ಬಿತ್ತರಿಸುವ ಕ್ರಾಂತಿಕಾರಿ ಕನ್ನಡ ಸಾಹಿತ್ಯವೇ ವಚನ ಸಾಹಿತ್ಯ ಮತ್ತು ಹರಿದಾಸ ಸಾಹಿತ್ಯ. ಇವುಗಳು ವ್ಯಕ್ತಿ ಮತ್ತು ಸಮಾಜದ ಬದಲಾವಣೆ, ಸುಧಾರಣೆಯ ಅತೀವ ಕಾಳಜಿಯನ್ನು ಪ್ರತಿಪಾದಿಸಿವೆ. 12 ಮತ್ತು 16 ನೇ ಶತಮಾನಗಳು ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಭಕ್ತಿಯ ಮೂಲಕ ವ್ಯಕ್ತಿಯ ದೌರ್ಬಲ್ಯಗಳನ್ನು, ಅಹಮಿಕೆಯನ್ನು ದಮನಗೊಳಿಸಿಕೊಂಡು ಉದಾತ್ತವಾಗಿ ಬದುಕಲು ಪ್ರೇರಕ ಶಕ್ತಿಗಳಾಗಿವೆ. ಮನುಷ್ಯಕುಲವನ್ನು ತೀವ್ರವಾದ ಬಾಧೆಗೊಳಪಡಿಸಿರುವ ಜಾತಿಭೇದ, ಲಿಂಗಭೇದ ಮತ್ತು ಅಸ್ಪೃಶ್ಯತೆ ಎಂಬ ತ್ರಿವಳಿಗಳನ್ನು

ಖಂಡಿಸುತ್ತಲೇ ಮಲಿನ ಮತಿಯನ್ನು ನಿರ್ಮಲಗೊಳಿಸುವುದಕ್ಕೆ ಈ ಎರಡು ಕಾಲಘಟ್ಟಗಳು ಯತ್ನಿಸಿವೆ. ಹಾಗಾಗಿ ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯಲ್ಲಿ ಈ ಎರಡು ಶೃಂಗಗಳನ್ನು ಸ್ಪರ್ಶಿಸಿದವರು. ಸ್ಪಂದಿಸಿದವರು ನಿಜಮಾನವರಾಗಿ ಬದುಕಲು ಸಾಧ್ಯವಾಗುತ್ತದೆ. ವಚನಸಾಹಿತ್ಯ ಮತ್ತು ಕೀರ್ತನಸಾಹಿತ್ಯ ರೈಲ್ವೇ ಹಳಿಯಿದ್ದಂತೆ ಈ ಎರಡರ ಗುರಿ ಒಂದೇ.

ಸಾವಿರಾರು ವರ್ಷಗಳಿಂದಲೂ ವರ್ಣಪದ್ಧತಿ, ಜಾತಿಪದ್ಧತಿ ಬೆಳೆದುಬಂದು, ಜಾತಿ–ಜಾತಿಗಳ ನಡುವೆ, ವ್ಯಕ್ತಿಗಳ ನಡುವೆ ಕಂದಕವನ್ನು ಏರ್ಪಡಿಸಿರುವ ಕುಟಿಲತೆಗಳನ್ನು ಸಂಪೂರ್ಣವಾಗಿ ನಾಶಗೊಳಿಸುವುದು ಕಷ್ಟಕರವಾಗಿದೆ. ಬುದ್ಧ, ಬಸವಣ್ಣ, ಕನಕದಾಸರು, ಸ್ವಾಮಿವಿವೇಕಾನಂದ, ಜ್ಯೋತಿಭಾಪುಲೆ, ಶಾಹುಮಹಾರಾಜ, ನಾರಾಯಣಗುರು, ಅಂಬೇಡ್ಕರ್, ಗಾಂಧೀಜಿ, ಪೆರಿಯಾರ್, ಲೋಹಿಯಾ, ಕುವೆಂಪು ಮೊದಲಾದವರು ಮನುಕುಲದ ಐಕ್ಯತೆಗಾಗಿ, ಸಮಷ್ಟಿಯ ಸಾಮರಸ್ಯಕ್ಕಾಗಿ ಸರ್ವರ ಏಳಿಗೆಗಾಗಿ ಸಂಪೂರ್ಣ ಸಮರ್ಪಿಸಿಕೊಂಡವರು..

ಹಿಂದಿನ ನೆನಪು, ಇಂದಿನ ಸ್ಥಿತಿಯ ಜಾಗ್ರತ ಪ್ರಜ್ಞೆಯಿಂದ ಮುಂದಿನ ಪ್ರಗತಿ ಕಾಣಲು ಸಾಧ್ಯ. ಹಾಗಾಗಿ ಹಿಂದಿನವರ ಜೀವನ–ಸಾಧನೆಗಳ ಅಧ್ಯಯನ, ಅವರುಗಳು ತೋರಿದ ಬದುಕುವ ದಾರಿಗಳ ಚಿಂತನಮಂಥನದಿಂದ ರಾಡಿಯಾಗುತ್ತಿರುವ ಬದುಕನ್ನು ತಿಳಿಯಾಗಿಸಿಕೊಳ್ಳಲು ಸಾಧ್ಯವಾಗುತ್ತದೆ.

# ಅಧ್ಯಾಯ–02

## ಕನಕದಾಸರ ಜೀವನ ಮತ್ತು ಸಾಧನೆ

"ಸಾಲು ಓಣಿಯೊಳಗ ಸಾರುತ ನಿಂತಾನ

ಸಾವಿರ ಹಾಡು ನಾಲಿಗೆಗೆ । ಕನಕಪ್ಪ

ಸಾಧುರ ಮಾತ ಸುರಿಸ್ಯಾನ"– ಎಂಬ ಜನಪದನುಡಿಯು ಕನಕದಾಸರ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಕಟ್ಟಿಕೊಡುತ್ತದೆ. ಜನಪದರ ನಾಲಿಗೆಯ ಮೇಲೆ ನಲಿದಾಡಿದ ಕನಕದಾಸರು ಸಾಂಸ್ಕೃತಿಕ ನಾಯಕರು. ಮನುಷ್ಯತ್ವವನ್ನು ಪ್ರತಿಪಾದಿಸಿದವರು. ಹರಿದಾಸ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಪ್ರಸಿದ್ಧರಾಗಿರುವ ಕನಕದಾಸರು ಮತ್ತು ಪುರಂದರದಾಸರು ಕನ್ನಡ ನಾಡು–ನುಡಿಗೆ ನೀಡಿರುವ ಕಾಣ್ಕೆ ಅಪೂರ್ವವಾದುದು.

ಕನ್ನಡಿಗರ ಆತ್ಮಶಕ್ತಿಯನ್ನು ಸದೃಢಗೊಳಿಸಿದ ಕನಕದಾಸರ ಜೀವನ ಮತ್ತು ಸಾಧನೆ ಬತ್ತಲಾರದ ಗಂಗೆ, ಸವೆಯಲಾರದ ಮಹಾಪರ್ವತ. ಸಾವಿಲ್ಲದ ಸಾಹಿತ್ಯದ ಮೂಲಕ ಚಿರಂತನ ಮೌಲ್ಯಗಳನ್ನು ನೀಡಿರುವ ಕನಕದಾಸರು ಮಾನವಕುಲ ಸಾಮರಸ್ಯ ಮತ್ತು ಸಮೃದ್ಧಿಯ ಸೆಲೆಯಾಗಬೇಕೆಂಬ ಕನಸು ಕಂಡವರು. ಆ ಕನಸ್ಸಿನ ನನಸ್ಸಿಗಾಗಿ ಹೋರಾಡಿದವರು. ದೇಸಿಯ ಸತ್ವ–ತತ್ವದ ನೆಲೆ–ಬೆಲೆಯನ್ನು ತೆರೆದು ತೋರಿಸಿದವರು.

ಕನಕದಾಸರ ಕಾಲ, ಸ್ಥಳ, ಜಾತಿ, ಕೃತಿರಚನೆಯ ಕಾಲದ ಬಗ್ಗೆ ವಿದ್ವಾಂಸರ ನಡುವೆ ಸಾಕಷ್ಟು ಚರ್ಚೆಗಳು ನಡೆದು, ಹತ್ತು ಹಲವು ಅಭಿಪ್ರಾಯಗಳು ಪ್ರಕಟವಾಗಿವೆ. 'ಬಾಡ'ಗ್ರಾಮ ಹಾವೇರಿ ಜಿಲ್ಲೆಯ ಶಿಗ್ಗಾಂವ್ ತಾಲ್ಲೂಕಿನಲ್ಲಿದೆ. ಆ ಗ್ರಾಮದಲ್ಲಿನ ಬೀರಪ್ಪ– ಬಚ್ಚಮ್ಮ ದಂಪತಿಗಳ ಮಡಿಲಲ್ಲಿ "ಕ್ರಿ.ಶ. 1495ರ ನವೆಂಬರ್5ರಂದು ಗುರುವಾರ"1 ಜನಿಸಿದವರೆಂದು ಗುರುತಿಸಲಾಗಿದೆ. ಕನಕದಾಸರ ಬಗ್ಗೆ ಹತ್ತು ಹಲವು ಐತಿಹ್ಯಗಳಿವೆ. ಬಹು ವರ್ಷಗಳ ಕಾಲ ಮಕ್ಕಳಿಲ್ಲದ ದೈವಭಕ್ತ ದಂಪತಿಗಳು ತಿರುಪತಿ ತಿಮ್ಮಪ್ಪನಿಗೆ ಹರಕೆ ಮಾಡಿಕೊಂಡರು. ಅದರ ಫಲವಾಗಿ ಜನಿಸಿದ ಮಗನಿಗೆ ತಿಮ್ಮಪ್ಪನೆಂದು ಹೆಸರಿಟ್ಟು ಘೋಷಿಸಿದರು. ಬೀರಪ್ಪ ವಿಜಯನಗರ ಸಾಮ್ರಾಜ್ಯದಲ್ಲಿ ಮಾಂಡಲೀಕ ಸೇವೆ ಸಲ್ಲಿಸುತ್ತಿದ್ದ. ತಿಮ್ಮಪ್ಪನಿಗೆ ಸುಮಾರು 16 ವರ್ಷವಾಗಿದ್ದಾಗ ಬೀರಪ್ಪ ಮರಣ ಹೊಂದಿದ. ತರುವಾಯ ತಿಮ್ಮಪ್ಪನಿಗೆ ತಂದೆಯ ಮಾಂಡಲೀಕ ಹುದ್ದೆಯು ದೊರೆಯಿತು. ತಾಯಿ ಬಚ್ಚಮ್ಮ ಸುಮಾರು 20ನೇ ವಯಸ್ಸಿಗೆ ಬಂದಾಗ ಮದುವೆ ಮಾಡಿದರು. ಮದುವೆಯಾಗಿ ಸುಮಾರು ಎರಡು ವರ್ಷಕ್ಕೆ ಗಂಡು ಮಗು ಪಡೆದ. ವಿಜಯನಗರ ಸಾಮ್ರಾಜ್ಯದ ಪರವಾಗಿ ಹಲವು ಯುದ್ಧಗಳಲ್ಲಿ ಭಾಗವಹಿಸಿ, ಕಲಿಯಾಗಿ ಹೋರಾಡಿದವನು ತಿಮ್ಮಪ್ಪ. ಇವರು ಭೂಮಿಯನ್ನು ಒಮ್ಮೆ ಅಗೆಸುತ್ತಿರುವಾಗ ಏಳು ಕೊಪ್ಪರಿಗೆ ಹೊನ್ನು

ದೊರೆತಿತು. ಅದನ್ನು ಬಡವರಿಗೆ ದಾನಮಾಡಿದರು. ದೇವಾಲಯಗಳ ಜೀರ್ಣೋದ್ಧಾರಕ್ಕೆ ವಿನಯೋಗಿಸಿದರು. ಅವರ ಪರೋಪಕಾರ ಗುಣಕ್ಕೆ ಮೆಚ್ಚಿದ ಜನತೆ 'ಕನಕ', 'ಕನಕನಾಯಕ'-ಎಂದೆಲ್ಲ ಗೌರವದಿಂದ ಕರೆದರು. ಕನಕನಾಯಕರಿಗೆ ತನ್ನ ಮಗ 10 ವರ್ಷದವನಿದ್ದಾಗ ಅಕಾಲಿಕ ಮರಣಕ್ಕೆ ಈಡಾಗಿದ್ದು, ತಾಯಿ ಮರಣಹೊಂದಿದ್ದು ಅಪಾರ ದುಃಖವನ್ನುಂಟು ಮಾಡಿ, ಅವರನ್ನು ಅಲೌಕಿಕ ಚಿಂತನೆಯಲ್ಲಿ ತೊಡಗಿಸಿದವು.

"ದೊರೆತನವ ಬಿಡಿಸಿ ಸುಸ್ಥಿರ ಮಾರ್ಗ ತೋರಿಸಿದೆ.

--------- ಕನಕ ದಳದಲ್ಲಿ ಬಂದು ಕಲೆತನೆಂದರೆ ಫೌಜ

ಕನಕುಮನಕಾಗುವುದು ಹರಿಯೆ-------------

ಧುರದಲ್ಲಿ ನಾಲ್ಕು ದಿಕ್ಕಲಿ ಹೊಕ್ಕು ಹೊಳೆವಂಥ

ಬಿರುದು ಬಿಂಕವ ಕಳೆದ ಹರಿಯೆ

ಪರಬಲವ ಕಂಡರೆ ಉರಿದು ಬೆಂಕಿಯಹ ಮನವ

ಸೆರೆ ಹಾಕಿ ನಿಲ್ಲಿಸಿದೆ ಹರಿಯೆ-----------

ಸ್ವಾರಿ ಹೊರಡಲು ಛತ್ರಭೇರಿ ನಿಸ್ಸಾಳಗಳು

ಭೋರೆಂಬ ಭೋಂಕಾಳೆ ಹರಿಯೆ

ಧೀರರಾಹುತರಾಣ್ಯ ಭಾರಿ ಪರಿವಾರದಹಂ

ಕಾರಭಾರವ ತೊರೆದೆ ಹರಿಯೆ"- ಎಂದು 'ಹರಿ ನಿಮ್ಮ ಪದಕಮಲ' ಕೀರ್ತನೆಯಲ್ಲಿ ಕನಕದಾಸರಾಗುವ ಪೂರ್ವದಲ್ಲಿನ ಬದುಕಿನ ಚಿತ್ರಣವಿದೆ. ಮಾಂಡಲೀಕನಾಗಿ, ವೀರಾವೇಶದಿಂದ ಹೋರಾಡಿ, ಬಿರುದು ಬಿಂಕಗಳನ್ನು ಪಡೆದಿರುವುದು. ಶತ್ರು ಸೈನ್ಯವೆಂದರೆ ಉರಿದು ಬಿದ್ದಂತಹ ಕೋಪ ತಾಳುವುದು, ಅಶ್ವಾರೋಹಿಯಾಗಿ ಹೋರಾಡಿದ್ದನ್ನೆಲ್ಲವನ್ನು ಹೇಳಿಕೊಳ್ಳುತ್ತಲೇ ದಾಸನಾದ ಪರಿಯನ್ನು ಚಿತ್ರಿಸಿರುವರು. ದೈಹಿಕ-ಮಾನಸಿಕವಾಗಿ ಸದೃಢವಾಗಿದ್ದ ಕನಕನಾಯಕ ಕಲಿತನ, ಯುದ್ಧ ನೈಪುಣ್ಯತೆ ದಾನಧರ್ಮದ ಧಾರಾಳತನಗಳು ವಿಜಯನಗರದ ಪ್ರಭುಗಳ ಮತ್ತು ಪ್ರಜೆಗಳ ಪ್ರಶಂಸೆಗೆ ಪಾತ್ರವಾಗಿದ್ದವು.

ಕಾಗಿನೆಲೆಯ ಕದನದಲ್ಲಿ ಕನಕನಾಯಕರು ಶತ್ರು ಸೈನ್ಯದ ಹೊಡೆತಕ್ಕೆ ಸಿಕ್ಕು, ಜರ್ಜರಿತನಾಗಿ ಪ್ರಜ್ಞೆ ತಪ್ಪಿ ಬಿದ್ದಿದ್ದಾಗ, ಕನಸಿನಲ್ಲಿ ಶ್ರೀಹರಿ ಬಂದು, ದಾಸನಾಗೆಂದು ಕೇಳಿದ್ದು, ಅದಕ್ಕೆ ಆತನ ಪ್ರತ್ಯುತ್ತರವನ್ನೊಳಗೊಂಡಂತೆ ದಾಸನಾದ ಬಗೆಯನ್ನು ತಿಳಿಸುವಂತಹ ಕೀರ್ತನೆಯೊಂದು ಹೀಗಿದೆ.

"ಮೊದಲು ನಿನ್ನುಪದೇಶಕೆದುರಿಸಿ ತಿರುಗೆ ನೀ

ನದನೆಲ್ಲ ಕ್ಷಮಿಸಿದೆಯಾ ಹರಿಯೆ

ಸುದತಿ ಮಕ್ಕಳ ಮೋಹದ ಮದವೇರಿ ನಾನಿರಲು

ಪದುಮಾಕ್ಷ ನೀ ಬಂದು ಪದೇ ಪದೆಗೆ ಸಾರಿದೆಯೊ

ಅರಿಗಳು ದಂಡೆತ್ತಿ ಬರಲು ನಾನವರೊಡನೆ

ಪರಿ ಪರೀ ಹೋರುತ್ತಿರಲು

ದುರುಳರೆನ್ನನು ಜೈಸಿ ಹರಿದಟ್ಟಿ ಬಂದೆನ್ನಾ

ಧರೆಗುರುಳಿಸಿದೆಯೊ ಹರಿಯೆ"-ಶ್ರೀಹರಿಯು ಸೇವಕನಾಗೆಂದು ಕೇಳಿದಾಗ ಅದಕ್ಕೊಪ್ಪದ ಕನಕನಾಯಕ ಶತ್ರುಗಳಿಂದ ಬಲವಾದ ಪೆಟ್ಟು ತಿಂದು, ಧರೆಗುರುಳುವುದು. ಆಗ ಹರಿಯ ಆಜ್ಞೆಯಂತೆ ದಾಸನಾಗುವುದರ ಪರಿಯನ್ನು ಕಾಣುತ್ತೇವೆ. ಕನಕನಾಯಕ ಶ್ರೀವೈಷ್ಣವ ಸಂಪ್ರದಾಯದ ತಿರುಮಲೆ ತಾತಾಚಾರ್ಯರ ಬಳಿ ಹೋಗಿ ಅವರಿಂದ ಶ್ರೀ ವೈಷ್ಣವ ದೀಕ್ಷೆಯನ್ನು ಪಡೆದು ಕನಕದಾಸರಾದವರು.

"------ಸದ್ಗುರು ಕರ!ವಾರಿಜೋದ್ಭವ ಶಿಷ್ಯ ಜನರ! ಪ್ರೇರಿಸಿ ಚತುರ್ವಿಧಫಲವೀವ ತಾತಾಚರಿಯರಡಿಗೆ ವಂದಿಸುವೆ'ಎಂಬ ಕೃತಜ್ಞತೆಯನ್ನು ತಮ್ಮ 'ಮೋಹನ ತರಂಗಿಣಿ' ಕಾವ್ಯದ ಪೀಠಿಕೆ ಭಾಗದಲ್ಲಿ ನಿವೇದಿಸಿರುವುದರಿಂದ ಕನಕನಾಯಕ ಕನಕದಾಸರಾಗಿ ಕುಡಿಯೊಡೆದದ್ದು ತಾತಾಚಾರ್ಯರಿಂದೆಂಬುದು ಸ್ಪಷ್ಟ. ಅನಂತರ ಅವರು ವ್ಯಾಸರಾಯರಲ್ಲಿ ಶಿಷ್ಯತ್ವವನ್ನು ಸಂಪಾದಿಸಿಕೊಂಡು ಹೂವಾಗಿ ಘಮಘಮಿಸಿದರು. ಸುಗಂಧವಾಗಿ ವ್ಯಾಪಿಸಿದರು.

ಸೃಷ್ಟಿಯ ವಿಸ್ಮಯಗಳು, ದೈವೀಶಕ್ತಿಯ ಅಗಾಧತೆಯನ್ನು ವಿಸ್ತರಿಸುತ್ತವೆ. ನೀರು, ಗಾಳಿ, ಬೆಂಕಿ, ಬೆಳಕು, ಭೂಮಿ, ನಕ್ಷತ್ರ, ಪ್ರಕೃತಿಸಿರಿ, ಪಕ್ಷಿಯ ಕಲರವ, ಪ್ರಾಣಿಸಂಕುಲದ ವೈವಿಧ್ಯತೆಗಳು, ವೈಶಿಷ್ಟ್ಯಗಳು, ಸುಪ್ತ ಶಕ್ತಿಯ, ಗುಪ್ತ ನಿಧಿಯ ಮಹಿಮೆಯು ಆಶ್ಚರ್ಯಗೊಳಿಸುತ್ತದೆ. "ಆ ಜಗತ್‌ಶಕ್ತಿ, ಆದಿಶಕ್ತಿ, ಪರಾತ್ಪರಶಕ್ತಿಯ ಅಸ್ತಿತ್ವವು ವ್ಯಾಸಕೂಟದ ಜಡರಿಗೆ ತಾತ್ವಿಕ

ತಿಳಿವಾಗಿದ್ದರೆ, ಕನಕದಾಸನಿಗೆ ಅದೊಂದು ಸಹಜಾನುಭವವೇ ಆಗಿದ್ದಿತು. ಈ ಮಹಿಮೆಯನ್ನು ಜಗಜ್ಜಾಹೀರು ಮಾಡಿದ ಕೀರ್ತಿ ವ್ಯಾಸರಾಯರದು. ಅವರ ಶ್ರೀಮಠದಲ್ಲಿ ಸಂಸ್ಕೃತವನಾಶ್ರಯಿಸಿದ ವ್ಯಾಸಕೂಟದವರೂ, ಕನ್ನಡವನ್ನು ದುಡಿಸಿಕೊಂಡ ದಾಸಕೂಟದವರು ಇದ್ದರಷ್ಟೆ. ಅವರು ಏನೇ ಆಗಿರಲಿ, ವ್ಯಾಸರಾಯರ ದೃಷ್ಟಿಯಲ್ಲಿ ಪುರಂದರದಾಸ ಕನ್ನಡದ ಹೇಮಕೂಟ; ಕನಕದಾಸ ಆ ಹೇಮಕೂಟದ ನೆತ್ತಿಯ ಮೇಲೆ ಹಾರಾಡುವ ಕನ್ನಡದ ಬಾವುಟ"2ವಾಗಿರುವಂಥವರು.

ಕನಕದಾಸರು ಆಧ್ಯಾತ್ಮ ಶಿಕ್ಷಣವನ್ನು ಪಡೆದು, ಅದರ ಆಳ-ಅಗಲವನ್ನು ಸೂಕ್ಷ್ಮನೆಲೆಯಲ್ಲಿ ಅರಿತುಕೊಳ್ಳಲು ಸನ್ಮಾರ್ಗದರ್ಶನ ಮಾಡಿದವರು ತಾತಾಚಾರ್ಯರು. ಬಾಡದಲ್ಲಿ ಜನಿಸಿ, ವಿಜಯನಗರದಲ್ಲಿ ಸುತ್ತಾಡಿ, ಕಾಗಿನೆಲೆಯಲ್ಲಿ ನೆಲೆಯಾಗಿ ಮನುಕುಲದ ನೆಲೆಯ ಮೂಲವನ್ನೆಲ್ಲ ಶೋಧಿಸುತ್ತಲೆ, ಆ ಶೋಧನಾ ಮಾರ್ಗದಲ್ಲಿ ಹೊಳೆದ ಹೊಳಪನ್ನು ತಮ್ಮ ಸಾಹಿತ್ಯದಲ್ಲಿ ಅಭಿವ್ಯಕ್ತಿಸಿರುವರು.

ವ್ಯಾಸರಾಯರ ಶಿಷ್ಯರಾದ ಕನಕದಾಸರಿಗೆ ಪುರಂದರದಾಸರ ಗೆಳೆತನವು ಲಭಿಸಿ, ಅವರ ಆಧ್ಯಾತ್ಮಿಕ ಚಿಂತನೆಗಳು ನೂರ್ಮಡಿಯಾಗತೊಡಗಿದವು. ವ್ಯಾಸರಾಯರ ಉದಾರತೆ, ಅಪೂರ್ವ ವ್ಯಕ್ತಿತ್ವದ ಪ್ರಭಾವ, ಮೌಢ್ಯಾಚರಣೆಯಲ್ಲಿ ನಿರತರಾಗಿದ್ದ ಮಡಿವಂತ ಸಂಪ್ರದಾಯವಾದಿಗಳ ವ್ಯಂಗ್ಯ, ವಿಡಂಬನೆ, ಕುಲಮದದಿಂದ ಮೆರೆಯುವ ಒಣಜಂಭದವರಿಂದ ಅನುಭವಿಸಿದ ಕುಲದ ಕಹಿ ಅನುಭವಗಳು ಕನಕದಾಸರಲ್ಲಿನ ಚೈತನ್ಯ ಶಕ್ತಿಯನ್ನು ಪ್ರಬಲಗೊಳಿಸಿದವು.

ಮೇಲುಕೋಟೆ, ಬಂಕಾಪುರ, ಕದರಮಂಡಲಗಿ, ಕನಕಗಿರಿ, ವಿಜಯನಗರ, ನಂಜನಗೂಡ, ಮಳೂರು ಸೋಸಲೆ, ಮುಳುಬಾಗಿಲು, ನರಸೀಪುರ, ಚಂಪಕಾರಣ್ಯ, ಭಾಗ್ಯಪುರ, ತಿರುಕೋವಲೂರು, ಬಿಳಿಗಿರಿ, ಆನೆಗೊಂದಿ, ಶ್ರೀಶೃಂಗ, ನಿಷಧಪುರಿ, ಮಹಾಕಾಶಿ, ಸುಬ್ರಹ್ಮಣ್ಯ, ಶಿವನಸಮುದ್ರ, ರಾಮಗಿರಿ, ಕಡಕೋಳ, ಪರಶುರಾಮಕ್ಷೇತ್ರ, ಗಯಾ, ದ್ವಾರಕೆ, ಮಥುರಾ, ಗೋಕುಲ, ಪುರಿ, ರಾಮೇಶ್ವರ, ಹೊಳಲ್ಕೆರೆ, ಚಿತ್ರದುರ್ಗ ಮೊದಲಾದ ಸ್ಥಳಗಳಿಗೆಲ್ಲ ಭೇಟಿ ನೀಡಿದ ಕನಕದಾಸರ ವಿವಿಧ ಸ್ಥಳಗಳ ವಿವಿಧ ಸಮುದಾಯಗಳ ಬದುಕಿನ ಲೋಕದ ಪರಿಚಯವನ್ನು ಪರಿಪೂರ್ಣವಾಗಿ ಪಡೆದವರಾಗಿದ್ದರು. ಈ ನಮ್ಮ ನಾಡು, ದೇಶದ ಮಹಾತ್ಮರು ದಾರ್ಶನಿಕರು, ಸಂತ-ಮಹಂತರನ್ನು ಕುರಿತು ಹತ್ತು ಹಲವು ಐತಿಹ್ಯಗಳು ಹುಟ್ಟಿಕೊಂಡಿದೆ. ಅವುಗಳ ಸಂಪೂರ್ಣ ತಿರಸ್ಕಾರಕ್ಕೆ ಯೋಗ್ಯವು ಅಲ್ಲ. ಪೂರ್ಣ ಪುರಸ್ಕಾರಕ್ಕೂ ಯೋಗ್ಯವಲ್ಲ. ಈ ಐತಿಹ್ಯಗಳಲ್ಲಿ ಒಂದು ಸತ್ಯದ ಎಳೆಯಿದ್ದರೆ, ಉಳಿದಂತೆ ಉತ್ಪ್ರೇಕ್ಷ, ಅವಾಸ್ತವ ಅಂಶಗಳು ಸೇರಿಕೊಂಡು, ಬೃಹದಾಕಾರವಾಗಿ ಬೆಳೆದಿರುವುದನ್ನು ಕಾಣುತ್ತೇವೆ. ಕನಕದಾಸರ ಜೀವನಕ್ಕೂ ಕೂಡ ಹಲವಾರು ಐತಿಹ್ಯಗಳು, ಪವಾಡ ಕಥೆಗಳು ಇವೆ. ಉಡುಪಿಯ ಶ್ರೀಕೃಷ್ಣ ದೇವಾಲಯದ ಪ್ರವೇಶದ ವಿರೋಧ, ಅದಕ್ಕೆ ಪೂರ್ವಾಭಿಮುಖವಾಗಿದ್ದ ಶ್ರೀಕೃಷ್ಣವಿಗ್ರಹ ಪಶ್ಚಿಮಾಭಿಮುಖ ತಿರುಗಿ ಕನಕದಾಸರಿಗೆ ದರ್ಶನ ನೀಡಿದ ಐತಿಹ್ಯ, ವ್ಯಾಸರಾಯರು ಕೆರೆ ಕಟ್ಟಿಸುವ ಸಂದರ್ಭದಲ್ಲಿ ಹೋದ

ಕನಕದಾಸರಿಗೆ 'ಕೋಣ' ಎಂದದ್ದು, ಅದುವೇ ಮಂತ್ರ ವೆಂದು ಜಪಿಸಿದ ಕನಕದಾಸರು ಕೋಣವನ್ನು ಪ್ರತ್ಯಕ್ಷವಾಗಿಸಿಕೊಂಡು ಕೆರೆ ಕಟ್ಟಿಸುವ ಕಾರ್ಯಕ್ಕೆ ಅಡ್ಡಿಯಾದ ಬಂಡೆಯನ್ನು ದೂಡಿಸಿದ್ದೊಂದು ಐತಿಹ್ಯ.

ವ್ಯಾಸರಾಯರು ತಮ್ಮ ಶಿಷ್ಯರಿಗೆಲ್ಲ ಬಾಳೆ ಹಣ್ಣು ಕೊಟ್ಟು ಯಾರು ಇಲ್ಲದ ಜಾಗದಲ್ಲಿ ತಿಂದು ಬರಲು ಹೇಳುವುದು ಶಿಷ್ಯರೆಲ್ಲ ತಮ್ಮ ತಮ್ಮ ತಿಳುವಳಿಕೆಯಂತೆ ಬಾಳೆಹಣ್ಣು ತಿಂದು ಬರುವುದು. ಕನಕದಾಸರು ತಿನ್ನದೇ ಹೋಗಿ 'ದೇವರು ಎಲ್ಲೆಡೆ ಇರುವನೆಂಬ ಸಮರ್ಥ ಉತ್ತರ ಕೊಡುವರು'. ಅಂತೆಯೇ ಕೈಯೊಳಗಿನ ಸಾಲಿಗ್ರಾಮ ಶಿಲೆಯ ಪ್ರಸಂಗದ ಮೂಲಕ ಕನಕದಾಸರಲ್ಲಿದ್ದ ಆಧ್ಯಾತ್ಮ ಸಂಪತ್ತು, ಅಪರೋಕ್ಷಜ್ಞಾನ ಸಂಪತ್ತು ಎಷ್ಟಿತ್ತೆಂಬುದು ಮನವರಿಕೆಯಾಗುವುದು. ಗುರುಮುಖೇನ ಅನುಭವ, ಅನುಭಾವದ ನೆಲೆಯಲ್ಲಿ ಕನಕದಾಸರು ದಾನಸಿದ್ಧಿ ಅಧ್ಯಯನಸಿದ್ಧಿ, ಊಹಾಸಿದ್ಧಿ, ಅಣಿಮಾದಿ ಸಿದ್ಧಿಗಳನ್ನು ಸಂಪಾದಿಸಿಕೊಂಡಿದ್ದವರು

"ದಾಸನಾಗಬೇಕು ಸದಾಶಿವನ ದಾಸನಾಗಬೇಕು

ದಾಸನಾಗಬೇಕು ಕ್ಲೇಶ ಪಂಚಕಳಿದು

ಆಸೆಯಲಿ ಮನಸೂಸಸೆ ಸರ್ವದಾ

ಮನದ ಕಲ್ಮಷ ಕಳೆದು ಮಹಾದೇ

ವನ ಮಹಿಮೆಯ ತಿಳಿದು

ಇನಿತು ಈ ಜಗವೆಲ್ಲ ಈಶ್ವರ ಮಯವೆಂದು

ಘನವಾದ ಮೋಹದ ಗಡಿಯನು ದಾಟುತ"

ಎಂಬ ಕೀರ್ತನೆಯಲ್ಲಿ ಅವರು ದಾಸರಾಗಿದ್ದು, ಆರು ಚಕ್ರದ ಅರಿವಿನೊಳಗೆ ಅದನ್ನು ಸಿದ್ಧಿಸಿಕೊಂಡಿದ್ದು ಅಲ್ಲದೆ ಶಿವಯೋಗ ಮತ್ತು ವೈಷ್ಣವಯೋಗವನ್ನು ಸಮನ್ವಯಗೊಳಿಸಿರುವುದನ್ನು ಕಾಣುತ್ತೇವೆ. ಸೋಸಲೆ ಮಠದಲ್ಲಿ ಕಪಟ ಪಂಡಿತ ವರ್ಗದವರ ಅಜ್ಞಾನ– ಅಹಂನ್ನು ಬಯಲುಗೊಳಿಸುವಂತಹ "ದೈವಸಾಕ್ಷಾತ್ಕಾರದ" ಪ್ರಸಂಗ, ತಿರುಪತಿಯಲ್ಲಿನ ಭೂಕಂಪನವನ್ನು ಸ್ತೋತ್ರದ ಮೂಲಕ ತಡೆದ ಪ್ರಸಂಗ, ತೇರನ್ನು ಎಳೆದ ಪ್ರಸಂಗ, ಆದಿಕೇಶವನ ಅನುಗ್ರಹದಂತೆ ಕನಕದಾಸರು ಬಾಡದಲ್ಲಿರುವ ಆದಿಕೇಶವನ ವಿಗ್ರಹವನ್ನು ಕಿತ್ತು ಹೆಗಲ ಮೇಲೊತ್ತುಕೊಂಡು, ಕಾಗಿನೆಲೆಗೆ ಹೋಗುತ್ತಿರುವಾಗ 'ಕುಂದೂರ' ಹತ್ತಿರ ಜನ ಬಂದು ಅಡ್ಡಗಟ್ಟುವುದು, ಅವರು ತಮ್ಮೂರ ಕಡೆ ಹಿಂದಿರುಗಿ ನೋಡಿದಾಗ ಬೆಂಕಿ ಬಿದ್ದಂತೆ

ಕಾಣುವುದು, ಅವರೆಲ್ಲ ತಮ್ಮೂರಿಗೆ ಓಡಿ ಹೋಗುವುದು, ಅಲ್ಲಿ ನೋಡಿದರೆ ಬೆಂಕಿ ಇಲ್ಲದಿರುವುದು, ಆಗ ಕನಕದಾಸರಲ್ಲಿಗೆ ಬಂದು ಕ್ಷಮೆ ಕೇಳುವ ಪ್ರಸಂಗ, ಉಡುಪಿಯಲ್ಲಿ ಕನಕದಾಸರು ಶ್ರೀಕೃಷ್ಣನಿಗೆ ಹಿಟ್ಟು ಅರ್ಪಿಸಿ, ಹಸಿವಿನಿಂದ ಇರುವುದು, ಶ್ರೀಕೃಷ್ಣ ಕನಕದಾಸರಿಗೆ ಆಭರಣಗಳನ್ನು ತಂದುಕೊಡುವುದು, ಆಭರಣ ಕಳ್ಳತನದ ಆರೋಪ ಕನಕದಾಸರ ಮೇಲೆ ಬರುವುದು, ವಾದಿರಾಜರು ಈ ಆರೋಪವನ್ನು ಮುಕ್ತಗೊಳಿಸುವ ಪ್ರಸಂಗ, ಈ ತೆರನಾದ ಹಲವು ಪ್ರಸಂಗಗಳು ಕನಕದಾಸರ ಜೀವನ ಮತ್ತು ಸಾಧನೆಯ ಸುತ್ತ ಹೆಣೆದುಕೊಂಡಿವೆ. ಇವುಗಳಲ್ಲಿ ಬಹುತೇಕ ತರ್ಕಕ್ಕೆ ಒಗ್ಗುವುದಿಲ್ಲವಾದರೂ, ಕನಕದಾಸರರು ಅಪೂರ್ವವಾದ ಅನುಸರಣೆಗೆ ಯೋಗ್ಯವಾದ ಜೀವನ ಕ್ರಮವಾಗಿತ್ತೆಂಬುದನ್ನು ಪ್ರತಿಪಾದಿಸುತ್ತವೆ. ಸುಮಾರು 90 ವರ್ಷಗಳ ಕಾಲ ಸುಧೀರ್ಘವಾಗಿ ಬದುಕಿ, ಈ ಜನ್ಮವನ್ನು ಸಾರ್ಥಕಪಡಿಸಿಕೊಂಡ ಮಹಿಮಾಪುರುಷ ಕನಕದಾಸರು.

‘‘ತರಳತನದಲಿ ಕೆಲವು ದಿನದುರು

ಭರದ ಗರ್ವದಿ ಕೆಲವು ದಿನ ಮೈ

ಮರೆದು ನಿಮ್ಮಡಿಗೆರಗದಾದೆನು ವಿಷಯ ಕೇಳಿಯಲಿ

ನರಕ ಬಾಜನನಾಗಿ ಕಾಮಾ

ತುರದಿ ಪರಧನ ಪರಸತಿಗೆ ಮನ

ಹರಿದೆ ಪಾಪವ ಕಳೆದು ರಕ್ಷಿಸು ನಮ್ಮನನವರತ’’ಎಂದು ‘ಹರಿಭಕ್ತಿಸಾರ’ ಕಾವ್ಯದಲ್ಲಿ ಹೇಳಿಕೊಂಡಂತೆ ಬಾಲ್ಯ ಮತ್ತು ಯೌವ್ವನ ಕಾಲಘಟ್ಟಗಳಲ್ಲಿನ ಇಂದ್ರೀಯಗಳಿಗೆ ದಾಸನಾಗಿ ಅನುಭವಿಸಿದ ಸಂಕಟಗಳನ್ನು ನಿವೇದಿಸಿಕೊಂಡಿರುವರು.

ಶೃಂಗಾರ ಕಾವ್ಯವಾದ **‘ಮೋಹನ ತರಂಗಿಣಿ’**, ಪ್ರೇಮಕಾವ್ಯವಾದ **‘ನಳಚರಿತ್ರೆ’**, ಸಾಮಾಜಿಕ ಸಂಘರ್ಷದ ಕಥನ ಕಾವ್ಯವಾದ **‘ರಾಮನಾಥ ಚರಿತ್ರೆ’**, ಭಕ್ತಿ ಕಾವ್ಯವಾದ **‘ಹರಿಭಕ್ತಿಸಾರ’**, ಉಪಲಭ್ಯವಿಲ್ಲದ **‘ನೃಸಿಂಹಸ್ತವ’**–ಎಂಬ ಕಾವ್ಯಗಳನ್ನು ಸುಮಾರು ಎರಡು ನೂರಕ್ಕಿಂತಲೂ ಹೆಚ್ಚು **ಕೀರ್ತನೆ**ಗಳನ್ನು ಕೆಲವು **ಮುಂಡಿಗೆ**ಗಳನ್ನು ರಚಿಸಿರುವ ಕನಕದಾಸರು ಸಂತಕವಿ, ವಿಶ್ವಬಂಧು, ಕ್ರಾಂತಿಕಾರಿಕವಿ, ಭಕ್ತಕವಿ, ಸಂತಶ್ರೇಷ್ಠ, ಯುಗ ಪ್ರವರ್ತಕ, ಪ್ರತಿಭಾನ್ವಿತ ಕವಿ, ಕಲಿ, ವರಕವಿ, ಚಿರಕವಿ ಎಂದೆಲ್ಲ ಅಭಿದಾನಗಳಿಗೆ ಪಾತ್ರರಾಗಿರುವವರು.

“ಯಾತರ ಕುಲದವನೆಂದುಸುರಲಿ ಶ್ರೀ

ನಾಥ  ಮಾಡಿದನೊಂದು ನರರೂಪವಯ್ಯ

ಹುಚ್ಚದಾಸೆಗೆ ಇನ್ಯಾತರ ಕುಲವಯ್ಯ”-ಎಂದು ಹೇಳಿಕೊಳ್ಳುವ ಕನಕದಾಸರು ಲೌಕಿಕದ ಕುಲವನ್ನು ಮೀರಿ ನಿಂತವರು. ಅವರನ್ನು ಕುರುಬ, ಬೇಡ, ಕಬ್ಬಲಿಗ ಜಾತಿಗೆ ಸೇರಿದವರೆಂಬ ವಾದ ಪ್ರತಿವಾದಗಳಿವೆ.

‘‘ಮಣ್ಣಿನ ಹಣತೆಗೆ ಎಣ್ಣೆಯ ತುಂಬಿ

ಹೊತ್ತಿಸಿದ ಬತ್ತಿ ಬೆಳಕಾದ ಬಳಿಕ

ಅದು ಯಾವ ಕುಲ; ಬೆಳಕು ಯಾವ ಕುಲ

ಮಣ್ಣ ಕಲಸಿದವನು

ಎಣ್ಣೆ ಸೋಸಿದವನು

ಹತ್ತಿಯ ಬಿತ್ತಿ ಬೆಳೆದವನು

ಕೂಡಿ ಕುಲವಳಿದು

ಬೆಳಕಾದ ಬಳಿಕ

ಅವರು ಯಾವ ಕುಲ

ಬೆಳಕು ಯಾವ ಕುಲ” ಎಂಬ ಕವಿ ಡಾ. ಕುಮಾರಚಲ್ಯ ಅವರ ಕವಿತೆಯಂತೆ ಕನಕದಾಸರು ಬೆಳಕಾದವರು. ಅವರು ಆ ಕುಲ, ಈ ಕುಲಕ್ಕೆ ಸೇರಿದವರೆಂದು ವಿಭಜಿಸಿವುದು ಸೂಕ್ತವಲ್ಲ. ಅವರು ಮನುಕುಲದೀಪಕರು. ಸಾಮಾಜಿಕ ಏಣಿಶ್ರೇಣಿ ವ್ಯವಸ್ಥೆಯನ್ನು ನಿರ್ಮಿಸಿಕೊಂಡು, ಕುಲ, ಜಾತಿಯ ಕೂಪದೊಳಗೆ ಬಿದ್ದವರಿಗೆ, ತನ್ನ ಜಾತಿ, ಕುಲ ಶ್ರೇಷ್ಠವೆಂದು ಬಿಗುವವರ ಮನದ ಮಾಲಿನ್ಯ ನಿರ್ಮೂಲನೆಗೆ ಕನಕದಾಸರ ಜೀವನವೇ ಸಾಧನ. ಸಮುದ್ರದ ನೀರು ಸೂರ್ಯನ ಶಾಖಕ್ಕೆ ಕಾಯುತ್ತದೆ. ಅದು ಆವಿಯಾಗಿ ಆಕಾಶದೆಡೆ ಸಾಗಿ ಮೋಡವಾಗುತ್ತದೆ. ಆ ಮೋಡ ಕರಗಿ ಇಳೆಗೆ ಮಳೆಯಾಗಿ ಬಂದು, ಹಳ್ಳಕೊಳ್ಳದಲ್ಲಿ ಕೆರೆ–ಬಾವಿಗಳಲ್ಲಿ ತುಂಬಿಕೊಂಡು, ಹತ್ತು ಹಲವು ಹೆಸರಿನ ನದಿಗಳಾಗಿ ಹರಿದು ಮತ್ತೆ ಸಾಗರ ಸೇರುತ್ತದೆ. ಅಂತೆಯೇ ವ್ಯಕ್ತಿಯ ಹುಟ್ಟು, ವಿಕಾಸ ಮತ್ತು ಅಂತ್ಯ.

ಕನಕನಾಯಕರಿಗೆ ತಂದೆ ನಾಡಗೌಡರಾಗಿದ್ದರಿಂದ ಯುದ್ಧ ವಿದ್ಯೆ, ಸಾಹಿತ್ಯ, ಸಂಗೀತಗಳ ಜ್ಞಾನವು ಲಭ್ಯವಾಯಿತು. ಬದುಕಿನ ವೈಭವವನ್ನು ಅನುಭವಿಸಿ, ಅನುಭಾವದೆಡೆಗೆ ಸಾಗಿದ ಕನಕದಾಸರು ಶೈವ–ಶ್ರೀವೈಷ್ಣವ– ಮಾಧ್ವ–ಮತಗಳ ಸಮನ್ವಯದೊಳಗೆ ಬೆರೆತು, ಅನುಭವದ ನೆಲೆಯಲ್ಲಿ ಸಾಗಿ ಸಾಗಿ ಸಾಮರಸ್ಯವನ್ನು ಪ್ರತಿಪಾದಿಸಿದವರು.

ಕನಕದಾಸರು ತಮ್ಮ ಜೀವನದ ಅನುಭವವನ್ನು ಸರಳವಾಗಿ ನೇರ ನುಡಿ ಮಾಲೆಯಲ್ಲಿ ಹೆಣೆದು ದಾಸಕೂಟ ಮತ್ತು ವ್ಯಾಸಕೂಟದವರೆಲ್ಲ ನಿಬ್ಬೆರಗಾಗುವಂತೆ ಮಾಡಿದವರು. ಅತ್ಯುನ್ನತ ಮಟ್ಟದ ವ್ಯಕ್ತಿತ್ವವನ್ನು ಪಡೆದುಕೊಂಡಿದ್ದರೂ ಕೂಡ ತನ್ನ ಧ್ಯಾನದ, ಆರಾಧನೆಯ ಶ್ರೀಕೃಷ್ಣನನ್ನು ತನ್ನ ಕೈಯಿಂದ ಮುಟ್ಟಿ ಮುಟ್ಟಿ ಪೂಜಿಸಬೇಕೆಂಬ ಮಹಾದಾಸೆ. ಅದು ಕೈಗೂಡದಿದ್ದಾಗ ಅದಕ್ಕೆ ಪ್ರತಿಭಟಿಸಿ, ಕೊನೆಗೆ ತಾನಿದ್ದ ಜಾಗದಲ್ಲೇ ತನಿಷ್ಟವಾದ ದೇವರಗಳನ್ನೆಲ್ಲ ಪ್ರತಿಷ್ಠಾಪಿಸಿ, ಆರಾಧನೆಯ ಆನಂದದಲ್ಲಿಯೇ ಅಮರರಾದ ಆತ್ಮಶೋಧನೆಯ ಆಧ್ಯಾತ್ಮ ಸಾಧಕರು ಕನಕದಾಸರು. ತಾಳ ತಂಬೂರಿಯನ್ನು ಹಿಡಿದು, ಅವುಗಳ ನಾದಲೋಕದಲ್ಲಿ ತೇಲಾಡುತ್ತಾ, ಮಾನವಲೋಕದ ಸರೋವರದಲ್ಲಿ ತೇಲಾಡುವ ತತ್ವ ಸಿದ್ಧಾಂತಗಳನ್ನು ತಿಳಿಸಿಕೊಟ್ಟಿರುವ ಕನಕದಾಸರು ತಮ್ಮ ವೃದ್ಧಾಪ್ಯ ದಿನಗಳನ್ನು ಕಾಗಿನೆಲೆಯಲ್ಲಿ ಕಳೆದರು. ಅವರ ದೇಹವಿಲ್ಲ ಅಷ್ಟೆ, ಅವರು ನಿರ್ವಹಿಸಿದ ಜೀವನ, ಮನುಕುಲದ ಏಳಿಗೆಗೆ ಹೋರಾಡಿದ ಹೋರಾಟ, ಅವರ ಸಾಹಿತ್ಯ ಚಿರಂಜೀವಿಯಾಗಿ ಮನುಕುಲಕ್ಕೆ ಸದಾ ಸನ್ಮಾರ್ಗದರ್ಶನ ಮಾಡುತ್ತಿರುತ್ತದೆ.

## ಅಧ್ಯಾಯ–03

# ಲೋಕದೃಷ್ಟಿ ಅರ್ಥ ಮತ್ತು ಸ್ವರೂಪ

ಜಾಗತೀಕರಣ, ಖಾಸಗೀಕರಣ, ಉದಾರೀಕರಣ, ನಗರೀಕರಣ, ಕೈಗಾರೀಕರಣಗಳು ಸುಖ, ಶಾಂತಿ ಸಂಬಂಧ–ಸಾಮರಸ್ಯ, ನ್ಯಾಯ, ನೀತಿ ಸದ್ಗುಣ–ಸದಾಚಾರ ಸವಲತ್ತು, ದೌಲತ್ತುಗಳು ಅನ್ನ–ಅಕ್ಷರ–ಅಭಿವೃದ್ಧಿಗಳು ಸಂವರ್ಧನೆಯಾಗುತ್ತವೆಂಬ ಭ್ರಮೆಯೊಳಗೆ ನೂಕಿ, ಹೊರ ಬರಲಾಗದೆ ಒದ್ದಾಡುತ್ತಿರುವುದನ್ನು ಕಂಡು ಗಹಗಹಿಸಿ ನಗುತ್ತಿವೆ. ಈವೊತ್ತಿನ ಲೋಕ ಯಾರೊಂದಿಗೆ ಹೇಳಿಕೊಳ್ಳಲೂ ಆಗದೆ, ತಾಳಿಕೊಳ್ಳಲೂ ಆಗದೆ, ದುರಾಸೆಯ ಸುಳಿಯೊಳಗೆ ಸಿಲುಕಿ ದೇಕು ದೇಕುತ್ತಿದೆ. ಈ ದೇಕುವುದರಲ್ಲಿಯೇ ಮುಳ್ಳು ಮುಳ್ಳುಗಳಾಗಿ ಮೆತ್ತಿಕೊಂಡಿದ್ದು, ಅಂಟಿಕೊಂಡಿದ್ದವುಗಳನ್ನು ಕಳೆದುಕೊಂಡಾಗ ತನುವಿಗೆ ತಂಪಾಗಿ, ಮನಕ್ಕೆ ಇಂಪಾಗಿ ಜೀವ–ಜೀವನಕ್ಕೆ ಆಹ್ಲಾದತೆಯು ಆವಿರ್ಭಾವವಾಗುವುದು. ಅದಕ್ಕೆ ಲೋಕದೃಷ್ಟಿ ಬೇಕೇ ಬೇಕು.

‘‘1)ಸೃಷ್ಟಿಯಲ್ಲಿ ಕಾಣುವ ಭೂಮಿ, ಆಕಾಶ, ಸಮುದ್ರಗಳ ಎಲ್ಲ ಭಾಗಗಳು ಸೇರಿದ ಭಾಗ; ವಿಶ್ವ; ಪ್ರಪಂಚ, ಜಗತ್ತು 2) ಭೂಮಿ, ಮರ್ತ್ಯಲೋಕ 3)ಜನ, ಪ್ರಜೆ, ಜನತೆ 4)ಮನುಷ್ಯ ಸಮುದಾಯ; ಮಾನವಕುಲ 5)ಲೋಕದ ವ್ಯವಹಾರ, ನಡವಳಿಕೆ 6)ನೋಡುವುದು; ನೋಟ 7)ಭೂಮಿಯು ಸೇರಿದಂತೆ ಮೇಲೆ ಏಳು ಮತ್ತು ಕೆಳಗೆ ಏಳು ಎಂದು ಕಲ್ಪಿಸಿರುವ ಜಗತ್ತು 8)ಮೂರು ಎಂಬ ಸಂಖ್ಯೆಯ ಸಂಕೇತ 9) ಏಳು ಎಂಬ ಸಂಖ್ಯೆಯ ಸಂಕೇತ 10)ಹದಿನಾಲ್ಕು ಎಂಬ ಸಂಖ್ಯೆಯ ಸಂಕೇತ”3 ಎಂಬರ್ಥಗಳನ್ನೊಂದಿರುವ **‘ಲೋಕ’** ಪದ ಮನೋಮಂದಿರದಲ್ಲಿ ವಿಸ್ಮಯವನ್ನುಂಟು ಮಾಡುತ್ತದೆ.

ಶ್ರೀತೋಂಟದ ಸಿದ್ಧಲಿಂಗ ಶಿವಯೋಗಿಗಳ **‘ವಚನ ಪದಪ್ರಯೋಗ ಕೋಶ’**ದಲ್ಲಿ ‘ಲೋಕ’ ಪದ ಕುರಿತು ಹೀಗಿದೆ: “ತತ್ವ ಬ್ರಹ್ಮಾಂಡಾದಿ ಲೋಕಾದಿಲೋಕಂಗಳೇನುಯೇನೂ ಇಲ್ಲದಂದು ಅನಿರ್ವಾಚ್ಯ ಮಹಾಶೂನ್ಯ ನಾಗಿರ್ದೆಯಲ್ಲಾ ನೀನು”, “ತಾನೆಂದೆನು ಇದಿರೆಂದೆನು. ಬರಿಯ ಬಯಲು ಭ್ರಮೆಗೊಳಗಾಯಿಲ್ಲಾ ಈ ಲೋಕ’’, “ಕಂಡೊಂದು ನುಡಿವುದೀ ಲೋಕ, ಕಾಣದೊಂದು ನುಡಿವುದೀ ಲೋಕ”, “ಇಚ್ಛಾಶಕ್ತಿ ತನ್ನ ಗರ್ಭದಲ್ಲಿ ಈರೇಳು ಲೋಕವ ಹೆತ್ತಳು ನೋಡಾ. ಆ ಲೋಕಾದಿ ಲೋಕಂಗಳೊಳಗೆ ತಾನೇ ಕಾಕಿಯಾಗಿ ಆ ಲೋಕದ ಉತ್ಪತ್ತಿ ಸ್ಥಿತಿ ಪ್ರಳಯಕ್ಕೊಳಗಾಗದೆ ನಿತ್ಯಳಾಗಿಪ್ಪಳು ನೋಡಾ”, “ಲೋಕದ ನಚ್ಚು ಮಚ್ಚೆಂಬ ಕಿಚ್ಚೆದ್ದು ಸುಡುತಿದೆ ನೋಡಾ” ‘‘ಆ ಲೋಕವೆಲ್ಲವು ಮುಕ್ತಿ ಸಾಮ್ರಾಜ್ಯವಾದುದ ಕಂಡು ಇದು ನಿತ್ಯ ನಿಜಲಿಂಗೈಕ್ಯವೆಂದರಿದೆನು ಕಾಣಾ” ಎಂಬ ವ್ಯಾಖ್ಯಾನಗಳು **‘ಲೋಕ’** ಪದದ ವಿಸ್ತಾರತೆಯನ್ನು ಅದರ ಆಳ ಅಂತರಾಳವನ್ನು ಪರಿಚಯಿಸುತ್ತವೆ.

ಲೋಕಕರ್ತ, ಲೋಕಕಲ್ಯಾಣ, ಲೋಕಗತಿ, ಲೋಕಗುರು, ಲೋಕಚಕ್ಷು, ಲೋಕಚೂಡಾಮಣಿ, ಲೋಕಜನನಿ, ಲೋಕಜಿತ್ತು, ಲೋಕಜ್ಞ, ಲೋಕತಂತ್ರ, ಲೋಕದೂರ, ಲೋಕಧರ್ಮ, ಲೋಕನಯನ, ಲೋಕನಾಥ, ಲೋಕಕಂಟಕ, ಲೋಕನಾಯಕ, ಲೋಕನಿಷ್ಠ, ಲೋಕನೇತ್ರ, ಲೋಕಪತಿ, ಲೋಕಪಾಲ, ಲೋಕಪಾವನ, ಲೋಕಪಿತ, ಲೋಕಪುರಾಣ, ಲೋಕಪ್ರತೀತ, ಲೋಕಪ್ರಸಿದ್ಧಿ, ಲೋಕಬಾಂಧವ, ಲೋಕಭಿನ್ನ, ಲೋಕಮತ, ಲೋಕಮರ್ಯಾದೆ, ಲೋಕಮಾತೆ, ಲೋಕಮಾನ್ಯ, ಲೋಕಮಿತ್ರ, ಲೋಕಯಾತ್ರೆ, ಲೋಕರಕ್ಷಕ, ಲೋಕರೂಢಿ, ಲೋಕವಾರ್ತೆ, ಲೋಕವಿಖ್ಯಾತ, ಲೋಕವಿರೋಧಿ, ಲೋಕವಾದ, ಲೋಕಹಿತ, ಲೋಕೋದ್ಧಾರ, ಲೋಕೋಕ್ತಿ– ಮೊದಲಾದ ಪದಗಳು **'ಲೋಕ'** ಪದಕ್ಕೆ ಉತ್ತರ ಪ್ರತ್ಯಯಗಳು ಸೇರಿ ನಿಷ್ಪನ್ನಗೊಂಡಿವೆ. ಅಂತೆಯೇ ಅಧೋಲೋಕ, ಕರ್ಮಲೋಕ, ಜನಲೋಕ ಭಕ್ತಲೋಕ, ಸತ್ಯಲೋಕ, ಊರ್ಧ್ವಲೋಕ, ಭೂಲೋಕ, ತಪೋಲೋಕ, ಪಿತೃಲೋಕ, ಇಹಲೋಕ, ದೇವಲೋಕ, ಜನಪದಲೋಕ, ಮೊದಲಾದ ಪದಗಳು ಪೂರ್ವಪ್ರತ್ಯಯಗಳಿಂದ ನಿಷ್ಪನ್ನಗೊಂಡಿದೆ. ಈ **ಲೋಕ** ಪದದ ವ್ಯಾಪ್ತಿ ಅಗಣಿತವಾದುದು.

ಕಣ್ಣಿನನೋಟ, ನೋಡುವ ಶಕ್ತಿ, ಕಣ್ಣು, ನೇತ್ರ, ಆಲೋಚನೆ, ವಿಚಾರ, ಅರಿವು, ಜ್ಞಾನ, ಅಭಿಪ್ರಾಯ, ಧೋರಣೆ ಎಂಬರ್ಥಗಳನ್ನೊಂದಿರುವ **'ದೃಷ್ಟಿ'** ಪದ ದೂರದೃಷ್ಟಿ, ಅಂತರ್‌ದೃಷ್ಟಿ, ಜೀವನದೃಷ್ಟಿ, ನೈತಿಕದೃಷ್ಟಿ, ಸಾಮಾಜಿಕದೃಷ್ಟಿ, ಧಾರ್ಮಿಕದೃಷ್ಟಿ, ಲೌಕಿಕದೃಷ್ಟಿ, ಪರಮಾರ್ಥಕದೃಷ್ಟಿ, ಶಾಸ್ತ್ರದೃಷ್ಟಿ ಮೊದಲಾದ ಪದಗಳು **'ದೃಷ್ಟಿ'** ಪದಕ್ಕೆ ಪೂರ್ವ ಪ್ರತ್ಯಯಗಳು ಸೇರಿ ನಿಷ್ಪನ್ನಗೊಂಡಿವೆ. ಅಂತೆಯೇ ದೃಷ್ಟಿಸೃಷ್ಟಿ, ದೃಷ್ಟಿವಾದ, ದೃಷ್ಟಿಚೇಷ್ಟೆ, ದೃಷ್ಟಿಬಂಧನ, ದೃಷ್ಟಿಭೇದ ಮೊದಲಾದ ಪದಗಳು ಉತ್ತರ ಪ್ರತ್ಯಯಗಳಿಂದ ನಿಷ್ಪನ್ನಗೊಂಡಿವೆ. **ಲೋಕ** ಮತ್ತು **ದೃಷ್ಟಿ–** ಈ ಎರಡು ಪದಗಳು ಅತ್ಯಂತ ಶಕ್ತಿದಾಯಕವಾದವುಗಳು. ವ್ಯಾಪಕವಾದ ಅರ್ಥವನ್ನೊಂದಿರುವಂಥವುಗಳು. **ಲೋಕ** ಪದಕ್ಕೆ **ದೃಷ್ಟಿ** ಪದ ಉತ್ತರ ಪ್ರತ್ಯಯವಾದರೆ, **'ದೃಷ್ಟಿ'** ಪದಕ್ಕೆ **'ಲೋಕ'** ಪೂರ್ವ ಪ್ರತ್ಯಯವಾಗುತ್ತದೆ. ಪೂರ್ವಪ್ರತ್ಯಯ ಭೂತವನ್ನು ಉತ್ತರಪ್ರತ್ಯಯ ವರ್ತಮಾನ ಮತ್ತು ಭವಿಷತ್ತನ್ನು ಪ್ರತಿನಿಧಿಸಿ, ಪೂರ್ವೋತ್ತರಗಳ ಅರಿವು ಬದುಕನ್ನು ಸಾರ್ಥಕಗೊಳಿಸುವುದು.

ಆಂಗ್ಲಭಾಷೆಯ World view ಪದಕ್ಕೆ ಸಂವಾದಿಯಾಗಿರುವ **ಲೋಕದೃಷ್ಟಿ** ಪದವು ವಿಶ್ವದೃಷ್ಟಿ ಜಗತ್‌ದೃಷ್ಟಿ ವಿಶ್ವಪರಿಕಲ್ಪನೆ ಮೊದಲಾದ ಸಮನಾರ್ಥಕ ಪದಗಳನ್ನೊಂದಿರುವಂತಹದ್ದು. "ನಮ್ಮ ಸುತ್ತಲಿನ ಲೋಕವನ್ನು ಪರಿಭಾವಿಸುವ ಸಮಷ್ಟಿ ರೂಪವೇ ಲೋಕದೃಷ್ಟಿ"4 ಈ ಜಗತ್ತಿನ ಆಗುಹೋಗುಗಳನ್ನು ಬಿಡಿ ಬಿಡಿಯಾಗಿಯೂ ದರ್ಶಿಸಿ, ಇಡಿಯಾಗಿ ನೋಡುವುದೇ **ಲೋಕದೃಷ್ಟಿ.** ಇದರೊಳಗೆ ಎಲ್ಲವೂ ಅಡಗಿದೆ. ಇದರ ವ್ಯಾಪ್ತಿ ಇಂತಿಷ್ಟೆ ಎಂದು ಗೆರೆ ಎಳೆದು ನೋಡಲಾಗದು. ಲೋಕದೃಷ್ಟಿ ಅಣುತೃಣದಿಂದ ಹಿಡಿದು ಬೃಹತ್‌ವರೆಗೂ ವ್ಯಾಪಿಸಿಕೊಂಡಿರುತ್ತದೆ.

ಮ್ಯಾಲಿನೋವ್‌ಸ್ಕಿ, ಡರ್ಖಿಂ, ಲೆವಿಸ್ಟ್ರಾಸ್ ಮೊದಲಾದ ಮಾನವಶಾಸ್ತ್ರಜ್ಞರು World view ಗೆ ಸಂಬಂಧಿಸಿದಂತೆ ವ್ಯಾಪಕ ಅಧ್ಯಯನ ಮಾಡಿದ್ದರು ಕೂಡ ಮೊದಲ ಬಾರಿಗೆ World view ಪದವನ್ನು 1941 ರಲ್ಲಿ ಬಳಸಿದವನು ರಾಬರ್ಟ್ ರೆಡ್‌ಫೀಲ್ಡ್. ಈತನು 1952 ರಲ್ಲಿ ಪ್ರಕಟಿಸಿದ The Premitive world view 1953 ರಲ್ಲಿ ಪ್ರಕಟಿಸಿದ The Premitive world and its Transformations' 1955 ರಲ್ಲಿ ಪ್ರಕಟಿಸಿದ 'The Little community view point for the study of human whole 1956 ರಲ್ಲಿ ಪ್ರಕಟಿಸಿದ "Peasant society and cukture:an Anthropological approach to civilization''5 ಎಂಬ ಕೃತಿಗಳಲ್ಲಿ ಲೋಕದೃಷ್ಟಿಯ ಹಿರಿಮೆಯನ್ನು ಚರ್ಚಿಸಿದ್ದಾನೆ. ಲೌಕಿಕ ಮತ್ತು ಅಲೌಕಿಕಗಳು ಒಂದರೊಳಗೊಂದು ಬೆರೆತು ಬೆರಗಾಗುವಂತೆ ಲೋಕದ ದರ್ಶನವನ್ನು ಕಟ್ಟಿಕೊಡುವುದು ಲೋಕದೃಷ್ಟಿ ಲೋಕದೃಷ್ಟಿಯಲ್ಲಿ ಇಡೀ ಬ್ರಹ್ಮಾಂಡದ ಉಗಮ, ವಿಕಾಸಗಳ ಚಿಂತನೆಯು ಅಡಗಿರುತ್ತದೆ. ಲೋಕದೃಷ್ಟಿಯೊಳಗೆ ವರ್ತನೆ, ಪರಿವರ್ತನೆಗಳ ಸಾರವು ಅಡಗಿರುತ್ತದೆ. ಪ್ರತಿ ಸಮುದಾಯ, ಪ್ರತಿ ಸಮೂಹಕ್ಕೂ ತನ್ನದೇ ಆದ ರೀತಿ–ನೀತಿಗಳು, ತತ್ವ ಸಿದ್ಧಾಂತಗಳು ಅನನ್ಯವಾಗಿರುತ್ತವೆ. "ಸುತ್ತಲ ಜಗತ್ತನ್ನು ಕುರಿತು ಆ ಸಮುದಾಯ ಕಂಡುಕೊಂಡ ದರ್ಶನವೇ ಅವರ ಲೋಕದೃಷ್ಟಿ ಅವರು ನಂಬಿ ಕಾಪಾಡಿಕೊಂಡು ಬಂದ ಮೌಲ್ಯಗಳೇ ಅವರ ಲೋಕದೃಷ್ಟಿ; ಅವರ ವಿವೇಕ ಮತ್ತು ಸಕಾರಣವಾಗಿ ರೂಪಿಸಿಕೊಂಡ ನೀತಿ ನಿಯಮಗಳೇ ಅವರ ಲೋಕದೃಷ್ಟಿ; ಸುತ್ತಲ ಒತ್ತಡಗಳನ್ನು ಮೀರಿ ತನ್ನದನ್ನು ಅನನ್ಯ ಶ್ರದ್ಧೆಯಿಂದ ಕಾಪಾಡಿಕೊಂಡ ಬಂದ ಗುಣವೇ ಲೋಕದೃಷ್ಟಿ; ಹೊಸದರ ಜೊತೆಗೆ ಬೆರೆತೂ ಅದರಲ್ಲಿ ತನ್ನತನವನ್ನು ಉಳಿಸಿಕೊಂಡ ವಿಶೇಷ ಪ್ರಕಿಯೇಯೇ ಲೋಕದೃಷ್ಟಿ."6

ಪ್ರಪಂಚದಲ್ಲಿ ಶೋಷಣೆಯ ವಿರುದ್ಧ ಮೊಟ್ಟಮೊದಲು ಪ್ರತಿಭಟಿಸಿದ ಗೌತಮಬುದ್ಧನ ಲೋಕದೃಷ್ಟಿ ಅನನ್ಯವಾದುದು. ಆತನ ಲೋಕದೊಳಗೆ ಪ್ರತಿಯೊಬ್ಬರು ಆಸೆಯ ಅನಾಹುತಗಳನ್ನು ಅರಿತು ಬಾಳಿದಾಗ ದುಃಖ ದೂರಾಗುವುದು. ಅದಕ್ಕೆ ಅಷ್ಟಾಂಗ ಮಾರ್ಗಗಳನ್ನು ಸೂಚಿಸಿ, ಅವುಗಳಿಗೆ ಅನುಗುಣವಾಗಿ ಬದುಕು ರೂಪಿಸಿಕೊಂಡಾಗ ಅನುಭವಿಸುವ ಆನಂದಕ್ಕೆ ಮಿತಿಯಿಲ್ಲ. ಇದನ್ನು ಎಲ್ಲರೂ ಪಡೆಯುವಂತಾಗಬೇಕೆಂಬುದು ಬುದ್ಧ ಮಾಹಾಶಯನ ಲೋಕದೃಷ್ಟಿ. ಕನ್ನಡನಾಡಿನ ಸಮಾಜ ವಿಷಮತೆಗೆ 12ನೆ ಶತಮಾನದಲ್ಲಿ ಆಧ್ಯಾತ್ಮಿಕ ಸಂಪತ್ತು ಸರ್ವರ ಸೊತ್ತಾದಾಗ ಸಮಸಮಾಜ ನಿರ್ಮಾಣವಾಗುವುದೆಂಬ ಕಟು ಸತ್ಯವನ್ನು ಪ್ರತಿಪಾದಿಸುವ ಸಲುವಾಗಿ ಅನುಭವ ಮಂಟಪವನ್ನು ಪ್ರತಿ ಭಕ್ತರ ಹೃನ್ಮನದಲ್ಲಿ ನಿರ್ಮಾಣ ಮಾಡಿದ ಬಸವಣ್ಣನ ಲೋಕದೃಷ್ಟಿಯು ಅಪೂರ್ವವಾದುದು. ಅಂತೆಯೇ ಪ್ರತಿ ದಾರ್ಶನಿಕರು, ಚಿಂತಕರು, ಸುಧಾರಕರು, ಆಯಾಯ ಕಾಲದ ಒತ್ತಡಗಳನ್ನು ದುಷ್ಟರ ದುರಾಗ್ರಹಗಳನ್ನು ಮೆಟ್ಟಿ ನಿಂತು, ಲೋಕಕ್ಕೆ ಹಿತವಾಗುವ, ಮನುಕುಲದ ಏಳಿಗೆಗೆ ಪ್ರೇರಕವಾಗುವ

ಮೌಲ್ಯಗಳನ್ನು ಪ್ರತಿಪಾದಿಸಿ, ಆ ಮೂಲಕ ಲೋಕೋದ್ಧಾರ ಮಾಡುವ ಕಾರ್ಯದಲ್ಲಿ ನಿರತರಾಗಿದ್ದ ಅವರ ಜೀವನ ಮತ್ತು ಸಾಧನೆಗಳೇ ಅವರುಗಳ ಲೋಕದೃಷ್ಟಿಯಾಗಿವೆ. ಅವರವರ ಲೋಕದೃಷ್ಟಿಗಳು ಅನನ್ಯವಾದವುಗಳು ಹಾಗೂ ಅಪೂರ್ವವಾದವುಗಳು.

ಕೋಗಿಲೆಯ ದನಿ ಕೋಗಿಲೆಗೆ ಶ್ರೇಷ್ಠವಾದರೆ, ಕಾಗೆಯ ದನಿ, ಕಾಗೆಗೆ ಶ್ರೇಷ್ಠ. ವ್ಯಷ್ಟಿ ವಿಶಿಷ್ಟತೆಯೂ ಸಮಷ್ಟಿಗೆ ಭಂಗ ಬರದಂತಿರಬೇಕು. ವ್ಯಕ್ತಿಯನ್ನು ಗೌರವಿಸುವುದರೊಂದಿಗೆ ಸಮಾಜದ ಸಾಮರಸ್ಯವು ಸಂವರ್ಧನೆಯಾಗಬೇಕು. ಸರ್ವರೂ ಏಳಿಗೆಯಾಗಬೇಕು. ಇದುವೇ ಲೋಕದೃಷ್ಟಿ.

ಲೋಕದೃಷ್ಟಿ ಏಕದೃಷ್ಟಿಯಾಗಿರದೆ ಹಲವು ವಿಷಯ ಆಚಾರ–ವಿಚಾರ ಆಲೋಚನೆಗಳಿಗೆ ಸಂಬಂಧಿಸಿರುತ್ತದೆ. ನಿರಂತರವಾಗಿ ಚಲನಶೀಲವಾಗಿರುವ ಲೋಕದೃಷ್ಟಿ ಆಯಾಯ ಕಾಲದ ಸಮಾಜ, ಸಮುದಾಯ ಸಮೂಹದ ಸಮಗ್ರ ಚಿಂತನ–ಮಂಥನಗಳ ಮೊತ್ತವಾಗಿರುತ್ತದೆ. ವ್ಯಕ್ತಿ ಮತ್ತು ಪ್ರಕೃತಿ ಸಂಬಂಧವನ್ನು ಬೆಸೆದು, ಒಂದರೊಳಗೊಂದು ಐಕ್ಯವಾಗುವಂತೆ ಪ್ರೇರೇಪಿಸುವ ಗುಣವು ಲೋಕ ದೃಷ್ಟಿಯಾದಾಗಿರುತ್ತದೆ. ವ್ಯಕ್ತಿ–ತನ್ನೊಳಗೆ ತಾನು ಯಾರೆಂಬುದನ್ನು ಅರಿತುಕೊಳ್ಳುತ್ತಲೇ ತನ್ನ ಸಾಮಿಪ್ಯ ಬಂದವರ ಮನಭೂಮಿಯಲ್ಲಿ ಅರಿವಿನ ಬೀಜವನ್ನು ಬಿತ್ತಿ, ಜೀವನ ಸಾರ್ಥಕವಾಗಿಸುವ ಪ್ರಕ್ರಿಯೆಗೆ ಉತ್ತೇಜಿಸುವ ಉದ್ದೀಪನ ಗುಣವು ಲೋಕದೃಷ್ಟಿಗೆ ಇರುತ್ತದೆ.

ಬಿಡಿಯಾಗಿದ್ದವರನ್ನು ಇಡಿಯಾಗಿಸುವ, ಒಟ್ಟುಗೂಡಿಸುವ, ಐಕ್ಯಗೊಳಿ ಸುವುದನ್ನು ಸಮ್ಮೋಹನಶಕ್ತಿ ಲೋಕದೃಷ್ಟಿಗೆ ಇರುತ್ತದೆಂಬುದನ್ನು ನಮ್ಮ ಚರಿತ್ರೆ, ಪುರಾಣಗಳಲ್ಲಿ ಬರುವ ದಾರ್ಶನಿಕರ, ಚಿಂತಕರ, ಭಕ್ತರ, ಸುಧಾರಕರ ಲೋಕದೃಷ್ಟಿಗಳು ಪುಷ್ಟೀಕರಿಸುತ್ತವೆ. ಹತ್ತು ಹಲವು ಮಂದಿಗಳ ಲೋಕದೃಷ್ಟಿಯ ಅಧ್ಯಯನ ಮತ್ತು ಅನುಷ್ಠಾನದ ವ್ಯಕ್ತಿ ಮುಂದಿನ ಜನಾಂಗಕ್ಕೆ ತನ್ನದೇ ಆದ ಲೋಕದೃಷ್ಟಿಯನ್ನು ರವಾನಿಸುವ ಧೀಶಕ್ತಿಯಾಗಬೇಕು. ಇದುವೇ ಲೋಕದೃಷ್ಟಿಯ ಸತ್ವ ತತ್ವವಾಗಿರುತ್ತದೆ.

# ಅಧ್ಯಾಯ-04

## ಕನಕದಾಸರ ಲೋಕದೃಷ್ಟಿ

ಜೀವನ ಎಂದರೇನು? ಎಂಬ ಪ್ರಶ್ನೆಗೆ ಉತ್ತರಕ್ಕಾಗಿ ಚಿಂತಕನೊಬ್ಬ ಕಾಡುಮೇಡು ಅಲೆಯುತ್ತಿರುತ್ತಾನೆ. ಅವನೆದುರಿಗೆ ಜೇನುಹುಳಗಳ ಸಮೂಹ ಬಂದಿತು.ಅವುಗಳಿಗೆ 'ಜೀವನ' ಎಂದರೇನು? ಎಂದು ಪ್ರಶ್ನಿಸಿದ. ಅದಕ್ಕೆ ಅವುಗಳು ಸವಿಯನ್ನು ಸಂಗ್ರಹಿಸುವುದು, ಸವಿಯನ್ನೇ ಸವಿಯುವುದು, ಸವಿಯನ್ನೇ ಹಂಚುವುದು, ಇದು ನಮ್ಮ ಜೀವನ ಎಂದವು. ತುಂಬಾ ಖುಷಿಯಾಯಿತು ಚಿಂತಕನಿಗೆ. ಪಯಾಣ ಮುಂದುವರಿಸಿದ. ಕೋಗಿಲೆಯನ್ನು ನೋಡಿದ. ಅದಕ್ಕೂ ಅದೇ ಪ್ರಶ್ನೆ ಕೇಳಿದ ಕೋಗಿಲೆ ಸೃಷ್ಟಿಯ ಸೊಬಗ ವಿಸ್ಮಯ ಕಂಡು ಆನಂದಪಡುವುದರೊಂದಿಗೆ ಇಡೀ ಸೃಷ್ಟಿಯೂ ಆನಂದಪಡುವಂತೆ ಹಾಡುವುದು ನನ್ನ ಜೀವನ ಎಂದಿತು. ಖುಷಿಯಾದ ಚಿಂತಕ ಮುಂದೆ ನದಿಯೊಂದನ್ನು ನೋಡಿದ. ಅದಕ್ಕೂ ಅದೇ ಪ್ರಶ್ನೆ ಕೇಳಿದ ನದಿ "ಸದಾ ಹರಿಯುತ್ತಿರುವುದು, ನನ್ನ ಸಾಮಿಪ್ಯದ ಪ್ರದೇಶವನ್ನೆಲ್ಲ ಹಚ್ಚ ಹಸಿರಾಗಿಸುವುದು. ಸಾಗರದೊಳಗೆ ಸೇರಿ ಆನಂದಿಸುವುದು. ಇದು ನನ್ನ ಜೀವನ ಎಂದಿತು. ಚಿಂತಕನಿಗೆ ನಿಜಜೀವನ ಏನೆಂಬುದು ಅರಿವಾಯಿತು. ಜೇನು ಹುಳುವಿನಂತೆ, ಕೋಗಿಲೆಯಂತೆ ನದಿಯಂತೆ, ಬಾಳಿ ಬೆಳಗುವುದೇ ಜೀವನ ಇಂಥ ಅಪೂರ್ವ ಜೀವನ ನಮ್ಮದಾಗಲು ಅಪೂರ್ವ ವ್ಯಕ್ತಿಗಳ ಲೋಕದೃಷ್ಟಿಯನ್ನು ಅರಿತು, ಆಚರಿಸುವುದು ಅತಿ ಅಗತ್ಯವಾಗಿದೆ.

ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಉಜ್ವಲ ತಾರೆಯಂತೆ ಬೆಳಗಿ, ಬೆಳಕು ತೋರಿಸುತ್ತಿರುವ ದಾರ್ಶನಿಕರಲ್ಲಿ ಕನಕದಾಸರು ಕೂಡ ಒಬ್ಬರು. ಇವರು ಭಾರತೀಯ ಭಕ್ತಿ ಪರಂಪರೆಯಲ್ಲಿ ಅಪೂರ್ವವಾದ ಸಾಧನೆ ಮಾಡಿದ ಸಾಧಕರು. ವಿಚಾರಶಕ್ತಿ. ಕ್ರಿಯಾಶಕ್ತಿ ಮತ್ತು ಭಾವಶಕ್ತಿಗಳ ತ್ರಿವೇಣಿ ಸಂಗಮವಾಗಿದ್ದ ಕನಕದಾಸರ ಬದುಕು ಮತ್ತು ಬರಹ ಈ ಭವಲೋಕದ ಬವಣೆಗಳ ನಿವಾರಣೆಗೆ ಸರಿದಾರಿ ತೋರಿಸುವ ಕೈದೀವಿಗೆಯಾಗಿವೆ.

ವ್ಯಕ್ತಿಯಿಲ್ಲದೆ ಸಮಾಜವಿಲ್ಲ, ಸಮಾಜವಿಲ್ಲದೆ ವ್ಯಕ್ತಿ ಇರಲಾರ. ವ್ಯಷ್ಟಿ ಮತ್ತು ಸಮಷ್ಟಿ ಒಂದಕ್ಕೊಂದು ಪೂರಕ ಮತ್ತು ಪ್ರೇರಕ. ಸಮಷ್ಟಿಯೊಳಗಿನ ವ್ಯಷ್ಟಿ ಸಂಸ್ಕೃತಿಯ ನಿರ್ಮಾಪಕನಾದಂತೆಯೇ ಅದೇ ಸಂಸ್ಕೃತಿಯು ವ್ಯಕ್ತಿಯ ವ್ಯಕ್ತಿತ್ವವನ್ನು ನಿರ್ಮಿಸುತ್ತದೆ. ಸಮಾಜ–ಸಂಸ್ಕೃತಿಯು ಪ್ರತಿಯೊಬ್ಬ ವ್ಯಕ್ತಿಯ ಶಕ್ತಿಯನ್ನು ಅವಲಂಬಿಸಿಯೇ ಅದು ಪ್ರಗತಿ ಇಲ್ಲವೇ ಅಧೋಗತಿಗೆ ಹೋಗುವುದು. ಒಬ್ಬ ವ್ಯಕ್ತಿಯ ಉನ್ನತಿ ಮತ್ತು ಅವನತಿ ಅವನಿಗೆ ಆಶ್ರಯಕೊಟ್ಟ ಸಮಾಜ ಮತ್ತು ಸಂಸ್ಕೃತಿಯನ್ನು ಅವಲಂಬಿಸಿರುತ್ತದೆ. ಉದಾತ್ತ ವ್ಯಕ್ತಿಗಳಿಂದ ಉದಾತ್ತ ಸಮಾಜ ನಿರ್ಮಾಣವಾಗುತ್ತದೆ. ವ್ಯಕ್ತಿಯು ಸದಾ

ಸದ್ಗುಣಗಳ ಸಾದಾಚಾರದಲ್ಲಿದ್ದಾಗ ಅವನು ಮನುಕುಲದ ಇತಿಹಾಸದಲ್ಲಿ ಅಮರನಾಗುತ್ತಾನೆ. ತಲೆತಲಾಂತರ ಆತನ ಆದರ್ಶಗಳ ಅನುಸರಣೆಗೆ ಅರ್ಹನಾಗುತ್ತಾನೆ. ಹೀಗೆ ಆದರ್ಶ ಹಾಗೂ ಅನುಕರಣೀಯವಾದ ವ್ಯಕ್ತಿತ್ವವನ್ನು ಸಂಪಾದಿಸಿಕೊಂಡು, ಆಧ್ಯಾತ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕ ಸಂಪತ್ತಾಗಿ ಆಪತ್ತಿನಲ್ಲಿದ್ದ ವ್ಯಷ್ಟಿ ಮತ್ತು ಸಮಷ್ಟಿಯ ಪ್ರಗತಿಗೆ ಸನ್ಮಾರ್ಗದರ್ಶಕರಾಗಿರುವ ಭಕ್ತ ಕವಿ ಸಂತ ಕನಕದಾಸರ ಲೋಕದೃಷ್ಟಿ ಅನನ್ಯವಾದುದು.

## ಕೀರ್ತನೆಗಳಲ್ಲಿ ಲೋಕದೃಷ್ಟಿ:

''ಏಕಾಂತವಾಗಿ ಮನೆಯಲ್ಲೋ ಮಠದಲ್ಲೋ, ಮನೆ ಮನೆ ತಿರುಗಿ ಭಿಕ್ಷೆ ಬೇಡುವಾಗ, ಬೀದಿಯಲ್ಲೋ ವೈಯಕ್ತಿಕವಾಗಿ ದೇವಾಲಯದಲ್ಲೋ ದೇವರ ಉತ್ಸವ ಹೊರಟಾಗ ಮಾಡುವ ಭಜನೆಯ ಸಮಯದಲ್ಲಿಯೋ ಇಷ್ಟ ದೇವತೆಯನ್ನು ಕುರಿತು ಭಾವಪೂರ್ಣವಾಗಿ ಹೃದಯ ತುಂಬಿ ಹಾಡುವ ಭಕ್ತಿ ಗೀತೆಗಳೇ ಕೀರ್ತನೆಗಳು."7 ಇವುಗಳ ಮೂಲಕ ಮಾನವ ಸಮಾಜದ ಅಂಕು–ಡೊಂಕುಗಳನ್ನು ತಿದ್ದಿ ತೀಡಿದ ಕೀರ್ತಿಕಾರರಲ್ಲಿ ಕನಕದಾಸರು ಒಬ್ಬರು.

ಲೋಕದ ಬದುಕು ಅಷ್ಟು ಸುಲಭವಾದುದಲ್ಲ. ಪ್ರತಿ ಕ್ಷಣಕ್ಷಣವೂ ತೊಡಕುಗಳ ಸರಮಾಲೆಯಾಗಿ ಎಣೆದುಕೊಂಡಿರುತ್ತದೆ. ಆಸೆಗಳು ಅಬ್ಬರಿಸುತ್ತಲೇ ಆನಂದ ನೀಡುವೆವೆಂಬ ಭ್ರಮೆಯೊಳಗೆ ತೋರಿಸಿ, ದಿಕ್ಕು ತಪ್ಪಿಸುತ್ತವೆ. ಅಂತಹ ಆಸೆ, ಅನಾಹುತಗಳು, ದುರಾಸೆಯ ದುರಂತಗಳನ್ನು ಅರಿಯದಿದ್ದರೆ ಜಾರಿ ಜಾರಿ ಪ್ರಪಾತಕ್ಕೆ ಬೀಳುವುದು ಶತಸಿದ್ಧ.

"ಅಡಿಗೆಯ ಮಾಡಬೇಕಣ್ಣಾ ನಾನೀಗ ಸುಜ್ಞಾನದ

ಅಡಿಗೆಯನು ಮಾಡಬೇಕಣ್ಣ॥

ಅಡಿಗೆಯನು ಮಾಡಬೇಕು ಮಡಿಸಬೇಕು ಮದಗಳನ್ನು

ಒಡೆಯನಾಜ್ಞೆಯಿಂದ ಒಳ್ಳೆ ಸಡಗರದಿ ಈ ಮನೆಯ ಸಾರಿಸಿ॥–ಎಂದು ಕನಕದಾಸರು ಸುಜ್ಞಾನದ ಅಡಿಗೆ ಮಾಡಿಕೊಳ್ಳಿರೆಂದು ಕರೆ ನೀಡುವರು. ಅಶ್ವಾಶ್ವತವಾದ ದೇಹ, ಶಾಶ್ವತವಾದ ಆತ್ಮ ಇವೆರಡರ ಸಮ್ಮಿಲನವೇ ಈ ಮಾನವ.ಅಶಾಶ್ವತವಾದ ದೇಹಕ್ಕೆ ಬೇಕಾದ ಸುಜ್ಞಾನದ ಅಡುಗೆಯನ್ನು ಮಾಡಿಕೊಳ್ಳದೇ ಮಹಾಪರಾಧಿಗಳಾಗುತ್ತೇವೆ. ಮೊದಲು ಸುಜ್ಞಾನದ ಅಡುಗೆಯನ್ನು ಮಾಡಿಕೊಂಡು, ಮದಗಳ ಮರ್ಮವನ್ನು ಅರಿತು, ಮಹಾದಾನಂ ದದ ಮಾರ್ಗವನ್ನು ಹಿಡಿದು, ಗೆಲುವನ್ನು ಸಾಧಿಸೆಂದು ತಿಳಿಸುವ ಕನಕದಾಸರು ಜ್ಞಾನವು ಸರ್ವರ ಸೊತ್ತಾಗಬೇಕೆಂಬ ಲೋಕದೃಷ್ಟಿಯನ್ನೊಂದಿದವರು.

“ಅರಿತು ನಡೆಯಲಿ ಬೇಕು ನರಕಕಾಯವೆತ್ತಿದ ಮೇಲೆ

ಅರಿಯದಿದ್ದರೆ ನರಕವೇ ಪ್ರಾಪ್ತಿ”–ಅರಿವು ಆನಂದದ ಮೂಲ. ಅರಿವಿಲ್ಲದವನು ಆಚಾರ ಹೀನನಾಗುತ್ತಾನೆ. ವಿಚಾರಹೀನನಾಗುತ್ತಾನೆ. ಇರುವಿನ ಅರಿವಿದ್ದಾಗ ಇಳೆಯಲ್ಲಿ ಕಳೆಯಾಗದೆ, ಬೆಳೆಯಾಗುತ್ತೇವೆ. ಬೆಳಕಾಗಿ ಬಾಳುವುದಕ್ಕಾಗಿ ಬೆದಕುವ ಬೇಸಾಯಗಾರರಾಗಬೇಕು. ಮಾನವ ದೇಹವನ್ನು ಪಡೆದ ಮೇಲೆ ದೇಹದ ಇತಿಮಿತಿಗಳ ಅರಿವಿರಬೇಕು. ಇಂದ್ರಿಯಗಳಿಗೆ ದಾಸರಾಗಿ, ಅವುಗಳು ಕುಣಿಸಿದಂತೆ ಕುಣಿದಾಗ ಅನುಭವಿಸುವ ವೇದನೆಗಳು, ಸಂಕಟಗಳು ಅಪರಿಮಿತ. ದೇವಿಪುರಾಣದಂತೆ ದೇಹಪುರಾಣದ ಜ್ಞಾನವನ್ನು ಸಂಪಾದಿಸಿದಾಗ ಸದಾನಂದರಾಗಿರುತ್ತವೆ. ಇಲ್ಲವಾದರೆ ದುಃಖ, ದುರಂತ, ದುರಾಕ್ರಮಣ, ದುಷ್ಟಚಿಂತನೆ, ದುರ್ವರ್ತನೆಗಳ ದುಷ್ಟರಾಗಿ ಪಾಪದ ಕೂಪದಲ್ಲಿ ಕುದಿಯು– ತ್ತೇವೆ. ಇದೇ ನರಕ. ಇಂಥ ನರಕ ಪ್ರಾಪ್ತಿಯಾಗುವುದು ‘ಅರಿವು’ ಇಲ್ಲದಿದ್ದಾಗ. ನಡೆ–ನುಡಿಯ ಅರಿವಿರಬೇಕು. ಲೋಕದ ನಡೆಯಲ್ಲಿ ಕಲ್ಲು–ಮುಳ್ಳುಗಳ, ಕಷ್ಟ–ನಷ್ಟಗಳ ಬಗೆ ಎಚ್ಚರಿಕೆಯ ಅರಿವಿದ್ದಾಗ ನಾವು ನಡೆಯುವ ಹಾದಿ ತಪ್ಪದು. ತಲುಪಬೇಕಾದ ಶೃಂಗವನ್ನು ತಲುಪಿ, ತೃಪ್ತಿಗಿರಿಯಾಗುತ್ತೇವೆ. ಇದುವೆ ಸ್ವರ್ಗ. ನಮ್ಮ ಅರಿವನ್ನು ಸ್ವರ್ಗ–ನರಕಗಳು ಆಧಾರಿಸಿವೆ. ಸರಿಯಾದ ಅರಿವು ಸಂಪಾದಿಸಿಕೊಂಡಾಗ ಸಂತೃಪ್ತರಾಗಿರುತ್ತೇವೆ. ಅರಿವಿನ ಕೊರತೆಯಾದಾಗ ನರಕಯಾತನೆ ಅನುಭವಿಸುತ್ತೇವೆ.

‘ನಾರದ ಭಕ್ತಿಸೂತ್ರ’ದಲ್ಲಿ ‘ಸಾತ್ವಸ್ಮಿನ್‌ಪರಮಾಪ್ರೇಮರೂಪ’–ಅಮೃತಮ– ಯವಾದ ಉತ್ಕಟ ಪ್ರೇಮವೇ ಭಕ್ತಿ ಎಂದು ಹೇಳಿದರೆ, ‘ಶಾಂಡಿಲ್ಯ ಸೂತ್ರ’ದಲ್ಲಿ ‘ಸಾಪರಮಾನುರಕ್ತೀರೇಶ್ವರೆಭಕ್ತಿಃ–ಈಶ್ವರನಲ್ಲಿ ನಾವು ಬೇಡುವ ಪರಮಾನು– ರಕ್ತಿಯೇ ಭಕ್ತಿ ಎಂದು ಹೇಳಲಾಗಿದೆ. ‘ಭಕುತಿಯೊಂದೇ ಸಾಕು ಮುಕುತಿಗೆ’ ಎಂದು ಆಚಾರ್ಯ ಮಧ್ವರು ಹೇಳಿದ್ದಾರೆ. ಭಕ್ತಿಯು ವ್ಯಕ್ತಿಯಲ್ಲಿನ ನ್ಯೂನತೆಗಳನ್ನು ಹೋಗಲಾಡಿಸಿ, ಶಕ್ತಿಯ ಸಂಚಯವಾಗಿಸುತ್ತದೆ. ಸರ್ವ ಸಮರ್ಪಣಾ ಭಾವವೇ ಭಕ್ತಿಯ ಲಕ್ಷಣ. ಇಂಥ ಭಕ್ತಿಯಿಂದ ಭವಲೋಕದ ಬಂಧನಗಳಿಂದ ಮುಕ್ತರಾದವರಲ್ಲಿ ಕನಕದಾಸರು ಒಬ್ಬರು. ಅವರು ಭಕ್ತಿಯ ಭವ್ಯತೆಯನ್ನು ಹೇಳುವ ಮೂಲಕ ಈ ಲೋಕದ ಸಾವಿರ ಸಂಕಟಗಳನು ನಿವಾರಿಸಲು ಸಾಧ್ಯವಿದೆಂಬುದನ್ನು ಮನವರಿಕೆ ಮಾಡಿದ್ದಾರೆ.

ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಹಾಗೂ ಆತ್ಮನಿವೇದನ–ಎಂಬ ನವವಿಧ ಭಕ್ತಿಗಳನ್ನು ‘ಭಾಗವತ’ದಲ್ಲಿ ಹೇಳಲಾಗಿದೆ. ಕನಕದಾಸರ ಕಾವ್ಯಕೃತಿಗಳ ಕೇಂದ್ರಬಿಂದು ಈ ಭಕ್ತಿ.

“ಆರು ಬಾಳಿದರೇನು ಆರು ಬದುಕಿದರೇನು

ನಾರಾಯಣನ ಸ್ಮರಣೆ ನಮ್ಮಗಿಲ್ಲದನಕ"-ಎಂಬ ಕೀರ್ತನೆಯಲ್ಲಿ ಹಣ್ಣು ಬಿಡದ ಮರ, ಕಣ್ಣಿಲ್ಲದವನಿಗೆ ಕನ್ನಡಿ, ಪುಣ್ಯವಿಲ್ಲದವನಲ್ಲಿನ ಪ್ರೌಢಿಮೆ, ಅಕ್ಕರೆಯಿಲ್ಲದವರಲ್ಲಿ ಮಕ್ಕಳು, ಮರ್ಕಟನ ಕೈಯೊಳಗೆ ಮಾಣಿಕ್ಯ ಇದ್ದರೇನು? ಏನು ಪ್ರಯೋಜನವಾಗಲಾರದು.

"ಕಲ್ಪ ಕಲ್ಪಿತ ಕಾಗಿನೆಲೆಯಾದಿಕೇಶವನ।

ಸ್ವಲ್ಪವೂ ನೆನೆಯದ ನರನಿದ್ದರೇನು" ಎನ್ನುವರು. ಆದಿಕೇಶವನನ್ನು ನೆನೆಯದ ನರನು ಇದ್ದರೇನು ಪ್ರಯೋಜನವಿಲ್ಲ. ನರನು ನಾರಾಯಣನಾಗಬೇಕು. ಮಾನವ ಮಹಾದೇವನಾಗಬೇಕೆಂಬ ತತ್ವದಂತೆ ಅಣುವಿನೊಳಗೆ ಕಣವು ಸೇರಬೇಕು. ಆದಿಕೇಶವನ ಸ್ಮರಣೆಯಿಂದ ನರಜನ್ಮ ಸಾರ್ಥಕವಾಗುತ್ತದೆಂದು ಪ್ರತಿಪಾದಿಸಿರುವರು.

ಈ ಲೋಕದ ಬಂಧುಗಳ ವ್ಯಾಮೋಹ ಮತ್ತು ಅದರ ಕರಿನೆರಳನ್ನು "ಆರು ಹಿತವರು ಎಂದು ನಂಬಬೇಡ। ಯಾರಿಗ್ಯಾರಿಲ್ಲ ಆಪತ್ತು ಬಂದೊದಗಿದಡೆ।-ಎಂಬುದನ್ನು ಪ್ರಹ್ಲಾದನ ಪಿತ, ಕರ್ಣನ ಮಾತಾ, ವಾಲಿಯ ಅನುಜ-ಮೊದಲಾದವರು ಮಾಡಿದ ದ್ರೋಹಗಳನ್ನು ಅನಾವರಣಗೊಳಿಸುವ ಮೂಲಕ ಬಂಧುಗಳನ್ನು ನಂಬದೆ "ಘನಕೃಪಾನಿಧಿ ಕಾಗಿನೆಲೆಯಾದಿಕೇಶವನ ಅನುದಿನ ನಂಬಿದವಗಿಹಪರದಿ ಸುಖವು"ಎಂದಿರುವರು. ದೈವನಂಬಿದವನಿಗೆ ಈ ಲೋಕ ಪರಲೋಕಗಳೆರಡರಲ್ಲೂ ಸುಖವು ಲಭ್ಯವಾಗುವುದು. ಲೌಕಿಕ ಸುಖ ನೆಲೆಯಲ್ಲಿಯೇ ಅಲೆಯುತ್ತಾ ಅಣ್ಣ ತಮ್ಮ ಅಕ್ಕ-ತಂಗಿ, ಮಾವ-ಅತ್ತೆ, ಹೆಂಡತಿ ಮಕ್ಕಳು, ಅಜ್ಜ ಅಜ್ಜಿ, ಅಪ್ಪ-ಅಮ್ಮ-ಈ ಎಲ್ಲಾ ಬಾಂಧವರುಗಳು ತಮ್ಮ ತಮ್ಮ ಸ್ವಾರ್ಥದಿಂದಲೇ ಬದುಕುವರು. ಅವರುಗಳು ಆಪತ್ತು ಬಂದಾಗ ರಕ್ಷಿಸಲಾರರು. ಆಪತ್ತು ಆಗಮಿಸಿದಾಗ ಅಪಾಯವಿಲ್ಲದೆ ಪಾರು ಮಾಡುವುದು ನೀನು ಆರಾಧಿಸುವ ದೈವ ಮಾತ್ರ. ಈ ಬಂಧುಗಳ ಮೇಲಿರುವ ಪ್ರೀತಿ, ಮಮತೆ, ಗೌರವ, ಅಭಿಮಾನಗಳನ್ನು ದೈವದೆಡೆಗೆ ತಿರುಗಿಸಿದಾಗ ಶಾಂತಿ ನೆಮ್ಮದಿ ದೊರೆಯುವುದು.

"ಏಕೆ ನಡುಗಿದೆ ತಾಯೆ ಭೂಮಿ ನಡುರಾತ್ರಿಯೊಳು ಜಗ

ದೇಕ ಮೊಡವಿಗೊಡೆಯನ ರಾಣಿ ಪರಮ ಕಲ್ಯಾಣಿ"-ಎಂದು ಭೂಕಂಪನಕ್ಕೆ ಪ್ರತಿಕ್ರಿಯೆಸುವ ಕನಕದಾಸರು ಅದರ ಕಾರಣಗಳನ್ನು ಶೋಧಿಸುವರು. ಗುರುಹಿರಿಯರಿಗೆ ಅಗೌರವ ತೋರುವ, ಕೊಂಕು ಮಾತುಗಳನ್ನಾಡುವವರು ನಾಶವಾಗಲೆಂದು, ಹೆತ್ತವರನ್ನು ಪೋಷಿಸಿದ ಮಕ್ಕಳನ್ನು ಹೊತ್ತು ಇರಲಾರನೆಂದು ಕಳ್ಳರು, ಕಪಟಿಗಳು, ಸುಳ್ಳುಗಾರರನ್ನು ಹೊರಲಾರನೆಂದು, ಕಲಿಯುಗದಲ್ಲಿ ಶ್ರೀಕೃಷ್ಣನ ಸ್ಮರಣೆ ಮಾಡದೆ, ಭಕ್ತಿಯಿಂದ ವೇದಶಾಸ್ತ್ರಗಳನ್ನು ಓದದೆ, ಹೆಣ್ಣಿನಲ್ಲಿ ಆಸಕ್ತರಾಗಿರುವ ಅಧಮರನ್ನು ಹೊರಲಾರನೆಂದು, ಕರ್ಮಿಷ್ಠರು ಹೆಚ್ಚಾಗಿ ನರಕುರಿಗಳೆಲ್ಲ ನಡತೆಗೆಟ್ಟವರೆಂದು ನಡುಗಿದೆ ಭೂ

ತಾಯಿ ಎಂದು ಕೇಳುವ ಮೂಲಕ ಈ ಭೂಮಾತೆಯ ಒಡಲು ಕುರಿಗಳಾದ ಈ ಮಾನವರು ಧರ್ಮಿಷ್ಟರಾಗಿರಬೇಕು. ಭಕ್ತರಾಗಬೇಕು, ಸತ್ಕರ್ಮದ ಪರಿಪಾಲಕರಾಗಬೇಕು. ಜಗದೊಡೆಯನ ಸ್ಮರಣೆಯಲ್ಲಿ ನಿರತವರಾಗಬೇಕು. ಆಗ ಈ ಭೂಮಿತೆ ಕಂಪಿಸಲಾರಳೆನ್ನುವರು. ಸದ್ವರ್ತನೆಯೇ ಸದಾ ಶಿವನ ಒಲುಮೆಗೆ ಸತ್ಪಥವೆಂಬ ಲೋಕದೃಷ್ಟಿ ಕನಕದಾಸರದು.

'ನಾನು' ಎಂಬುದು ನಾಶ. 'ನೀನು' ಎಂಬುದು ನಿಲುಕದೆ ಬೆಳೆಯಲು ಪೋಷಕವಾಗುವ ಮಾರ್ಗ. ನಾನು ನಾನೆಂದು ಅಹಂಕಾರ ಪಡದೆ, ನೀನು ನೀವು ಎಂದು ಎಲ್ಲರೊಳಗೊಂದಾಗಿರೆಂಬ ಸದಾಶಯವನ್ನು ಬಿತ್ತುವ ಕನಕದಾಸರು "ಏನು ಬರುವುದೊ ಸಂಗಡೇನು ಬರುವುದೊ। ದಾನಧರ್ಮ ಮಾಡಿ ಬಹು ನಿಧಾನಿಯೆನಿಸಿಕೊಳ್ಳೊ ಮನುಜ" ಎನ್ನುವರು. ಹೆಣ್ಣು, ಮಣ್ಣು, ಹೊನ್ನಿನ ಮೋಹದಿಂದಾಗುವ ದುಷ್ಪರಿಣಾಮಗಳನ್ನು ಚಿತ್ರಿಸುವುದರೊಂದಿಗೆ ದಾನಿಯಾಗು, ಧರ್ಮವಂತನಾಗು ಆಗ ಈ ಮನುಜಜನ್ಮ ಸಾರ್ಥಕವೆಂಬುದನ್ನು ಸ್ಪಷ್ಟಪಡಿಸಿರುವ ಕನಕದಾಸರು ಮೌಢ್ಯಾಚರಣೆಗಳಾದ ಬೇವಿನುಡಿಗೆ, ಕುರಿಕೋಣ ಬಲಿ ನೀಡುವ ಹಬ್ಬ ಜಾತ್ರೆಗಳು ಬಿಟ್ಟು, ಆದಿಕೇಶವನನ್ನು ನೆನೆಯಿರಿ ಎನ್ನುವರು.

ಕನಕದಾಸರು ಕಾಲಜ್ಞಾನಿಯಾಗಿದ್ದವರೆಂಬುದಕ್ಕೆ ಅವರ ಕೀರ್ತನೆಗಳು ಸಾಕ್ಷಿಯಾಗುತ್ತವೆ.

"ಕಲಿಯುಗದ ಮಹಿಮೆಯನು ಕಂಡಷ್ಟು ಪೇಳುವೆನು

ಜಲಜನಾಭನ ಕೃಪೆಯ ಪಡೆದವರು ಕೇಳಿ॥

ಸತ್ಯ ಧರ್ಮಗಳೆಲ್ಲ ಎತ್ತ ಪೋದವೊ ಕಾಣೆ

ಉತ್ತಮದ ಜೀವನಕೆ ದಾರಿಯಿಲ್ಲ,

ನಿತ್ಯದಲ್ಲಿ ಕಳವು ವ್ಯಭಿಚಾರವುಳ್ಳವರೆಲ್ಲ

ಅರ್ಥಸಂಪನ್ನರಾಗನುಭವಿಸುತಿಹರು"–ಎನ್ನುವುದು ಈವೊತ್ತಿನ ಸಂದರ್ಭ ದಲ್ಲಿನ ಅವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಅತ್ತೆಯು ಸೊಸೆಯಾಗಿ, ಸೊಸೆಯು ಅತ್ತೆಯಂತೆ, ಮಗನು ತಂದೆಯಾಗಿ, ತಂದೆಯು ಮಗನಾಗಿ, ಹೆಂಡತಿ ಗಂಡಾಗಿ ವರ್ತಿಸುತ್ತಿರುವರು, ವೈರಿ ವರ್ಗವು ಹೆಚ್ಚಾಗಿರುವುದು, ದೈವ, ಉತ್ತಮ ಗುರುಹಿರಿಯರನ್ನು ಹೀಯಾಳಿಸಿದ ಅಧಮರೇ ಸಿರಿಸಂಪತ್ತಿನ ಸೊಕ್ಕಿನಿಂದ ಮೆರೆಯುವರು. ಸಾಧು ಸಜ್ಜನರನ್ನು ಕಾಪಾಡುವವರಾರಿಲ್ಲ. ಬ್ರಾಹ್ಮಣರು ತಮ್ಮ ಸ್ವಭಾವದ ಶುದ್ಧತೆಯನ್ನು ಕಳೆದುಕೊಂಡು ತಿರಿದು ತಿನ್ನುವರು. ಯುದ್ಧ ಮಾಡುವ ಶೂರರಿಗೆ ಹಣ ಕೊಡುವವರಿಲ್ಲ. ಭೂಮಿಗೆ ಬೀಳುವ ಮಳೆಯು ಖಂಡಮಂಡಲವಾಗುವುದು. ಅನ್ನ ಬಟ್ಟೆಗೆ ಕೊರತೆಯಿಲ್ಲದ ಬಾಳುವವರನ್ನ ಭಿನ್ನ ತಂತ್ರವ ಮಾಡಿ ಕೆಡಿಸುವರು. ಕ್ರೂರ ಮೃಗಗಳಂತೆ ಕ್ರೂರಿಗಳು ಹೆಚ್ಚಾಗುವರು. ಆಳಿದ ಅರಸರಿಗೆ ದ್ರೋಹ ಬಗೆಯುವವರೆ ಧನಧಾನ್ಯ ಮನೆ

ಹೊಂದಿರುವರು. ಪರಿಶುದ್ಧ ಹೆಂಡತಿಯನ್ನು ಬಿಟ್ಟು ಸೂಳೆಗೆ ನೆಚ್ಚಿಕೊಂಡಿರುವವರು ಹೆಚ್ಚಾಗುವವರು. ಪತಿವ್ರತೆಗೆ ಉಡಲು ವಸ್ತ್ರವಿಲ್ಲ. ವ್ಯಭಿಚಾರಿಣಿಯರು ಒಡವೆವಸ್ತ್ರಗಳಿಂದ ಮೆರೆಯುವರು. ನೂರು ಸಾವಿರಕ್ಕೊಬ್ಬಳು ಪತಿವ್ರತೆ. ಇನ್ನುಳಿದವರ ಮನವು ಮಾಲಿನ್ಯವಾಗಿ ಅನ್ಯ ಪುರುಷರ ಕೂಡಿ ಗತಿಗೆಟ್ಟು ಹೋಗುವರು, ಹರಿಹರರ ಪೂಜೆಗಳು ಹಗರಣಗಳಾವವು. ಉರಿಮಾರಿ ಚಾಮುಂಡಿಶಕ್ತಿಗಳನ್ನು ಆರಾಧಿಸಿ, ಕುರಿಕೋಣ ಬಲಿಕೊಡುವರೆಂದು ಕಾಲಜ್ಞಾನವ ನುಡಿದಿರುವರು.

"ನಡೆದ ಕಾರ್ಯಗಳೆಲ್ಲ ನುಡಿಯಲೆನ್ನಳವಲ್ಲ

ಒಡೆಯ ನೀನೇ ಬಲ್ಲೆ ಕಲಿಯುಗದ ಮಹಿಮೆ

ತಡವ ಮಾಡಲಿಬೇಡ ತಾಳಲಾರದು ಲೋಕ

ಮೃಢನ ವೈರಿಯ ಪೆತ್ತ ಆದಿಕೇಶವನ"–ಎಂದು ಮೊರೆ ಇಡುವರು. ಇಂದು ಅನ್ಯಾಯ, ಅನಾಚಾರ, ಅಧ್ಯಕ್ಷತೆ, ಅಪ್ರಾಮಾಣಿಕತೆ, ಅನೀತಿ, ಅನಿಷ್ಟತೆ, ಅಕ್ರಮ, ಅಸತ್ಯ, ಅಧರ್ಮಗಳು, ವಿಜೃಂಭಿಸುತ್ತವೆ. ಇವುಗಳ ನಾಶಕ್ಕೆ ಭೂ ತಾಯಿ ಕಂಪಿಸೆಂದು ಕರೆಯುವ ಮೂಲಕ, ಪರಿಷ್ಕಾರಕ್ಕೆ, ಸಂಸ್ಕಾರಕ್ಕೆ ಸತ್ಯದ ಸಾಕ್ಷಾತ್ಕಾರಕ್ಕೆ ಸರಿದಾರಿಗೆ ತೋರಿಸುವ ದಾರಿದೀಪ ಕನಕದಾಸರು.

ಈ ದಿನದ, ಈ ಕ್ಷಣದಲ್ಲಿ ಅನುಭವಿಸುವ, ನೋಡುವ, ಕಾಡುವ, ಬೇಡುವುದೆನ್ನಲ್ಲ "ಕಲಿ ಹೆಚ್ಚು ಬಂದಿತಲ್ಲ" ಎಂಬ ಕಿರ್ತನೆಯಲ್ಲಿ ಪ್ರತಿ ಕುಟುಂಬ, ಪ್ರತಿ ಸಮಾಜ, ಸಮೂಹದೊಳಗಿನ ಕಲಹ ಕಲ್ಮಷಗಳನ್ನು ನಿಜ ನಿಜವೆಂದು ತಲೆದೂಗುವಂತೆ ಕನಕದಾಸರು ಕಾಲಜ್ಞಾನ ನುಡಿದಿರುವರು. ಇಂದು ಮುಗಿಲುಮುಟ್ಟಿ ಆರ್ಭಟಿಸುವ ಭ್ರಷ್ಟತೆ, ತಂತ್ರಜ್ಞಾನದ ಉತ್ತುಂಗವೆಲ್ಲ ಪರಿಹಾಸ್ಯವೆನ್ನುವರು.

"ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ

ಕುಲದ ನೆಲೆಯೇನಾದರೂ ಬಲ್ಲಿರಾ" ಎಂಬ ಕೀರ್ತನೆಯಲ್ಲಿ ಈ ಸಮಾಜಕ್ಕೆ ಅಂಟಿದ ಜಾಡ್ಯವಾದ 'ಕುಲ'ದ ಮೂಲ ನೆಲೆಯನ್ನು ಪ್ರಶ್ನಿಸುವ ಕನಕದಾಸರು ಜಲದ ಕುಲ ಯಾವುದು? ಆತ್ಮ ಯಾವ ಕುಲ? ಜೀವ ಯಾವ ಕುಲ? ಎಂದೆಲ್ಲ ಪ್ರಶ್ನಿಸಿ, ಕುಲದ ಮೂಲ ಹುಟ್ಟಲ್ಲ. ಹೀನ–ಉಚ್ಛ ಕುಲ ಎನಿಸಿಕೊಳ್ಳುವುದು ನಮ್ಮಗಳ ನಡೆ–ನುಡಿಯನ್ನು ಆಧಾರಿಸಿರುವಂತಹದ್ದು. ಕುಲದ ಶ್ರೇಷ್ಠತೆಯ ವ್ಯಸನಕ್ಕೆ ಸಿಲುಕಿ ಮಸಣ ಸೇರಬೇಡಿರೆಂದು ತಿಳಿ ಹೇಳುವರು.

“ಜಪವ ಮಾಡಿದರೇನು ತಪವ ಮಾಡಿದರೇನು

ವಿಪರೀತ ಕಪಟಗುಣ ಕಲುಷವಿದ್ದವರು’’–ಎಂದು ಹೇಳುವಂತೆ ಕಪಟಗುಣವೇ ಕಳಂಕದ ಮೂಲ. ಕೀರ್ತಿ ಕಳಸದ ನೆಲೆ ಕಪಟರಹಿತಗುಣ. ಬಾಯಿಯಲ್ಲಿ ಬೆಣ್ಣೆಯಂತಹ ಮಾತನಾಡಿ, ಮನದೊಳಗೆ ಮಹಾ ಕಾರ್ಕೋಟಕವನ್ನು ತುಂಬಿಕೊಂಡಿರುವ ವೇಷಧಾರಿಗಳನ್ನು ಗೋಮುಖ ವ್ಯಾಘ್ರರನ್ನು, ಸಾಧುಸನ್ಯಾಸಿಯ ವೇಷ ತೊಟ್ಟು ಅದಕ್ಕೆ ತದ್ವಿರುದ್ಧವಾದ ಕೃತ್ಯಗಳಲ್ಲಿ ತೊಡಗಿರುವವರನ್ನು ಟೀಕಿಸುವ ಕನಕದಾಸರು ಜಪ–ತಪ ಮಾಡುವ ನಾಟಕಕ್ಕಿಂತ ಸರಳ ನಡೆ–ನುಡಿಯ ಸದ್ಗುಣಶೀಲ ಸಂಪನ್ನರಾಗಿ ರೆಂಬ ಸರಳ ಸುಲಭ ಮಾರ್ಗವನ್ನು ತೋರಿಸುವ ಲೋಕದೃಷ್ಟಿ ಇವರದು.

‘ಡಿಂಬಿನೊಳು ಪ್ರಾಣವಿರಲು’ ಕೀರ್ತನೆಯಲ್ಲಿ ಆಕಸ್ಮಿಕ ಹುಟ್ಟು, ನಿಶ್ಚಿತ ಸಾವಿನ ನಡುವಿನ ಬದುಕಿನ ಭರಾಟೆಯ ಭರ್ಜಿಗೆ ಸಿಲುಕಿ ನಲುಗುವುದರ ಚಿತ್ರಣವಿದೆ. ‘ಹುಟ್ಟುತ್ತೇನು ತರಲಿಲ್ಲ ಹೋಗುತ್ತೇನು ಒಯ್ಯಲಿಲ್ಲ।––––– ಹೊಟ್ಟೆ ಬಲು ಕೆಟ್ಟದೆಂದು ಎಷ್ಟು ಕಷ್ಟಪಟ್ಟ ಪ್ರಾಣ। ಬಿಟ್ಟು ಹೋಗುವಾಗ ಗೇಣು ಬಟ್ಟೆ ಕಾಣಲಿಲ್ಲವೋ।–ನೀರಗುಳ್ಳೆಯಂತಹ ಅಸ್ಥಿರವಾದ ಜೀವನ, ಉಳ್ಳಿ ಪೊರೆಯಂತ ಸಂಸಾರದಾಟದ ವಾಸ್ತವ ಚಿತ್ರಣವನ್ನು ತಿಳಿಸುವ ಕನಕದಾಸರು ಮೋಹದ ದಾಹಕ್ಕೆ, ಅಪರಿಮಿತ ಆಸೆಯ ಅನಾಹುತಕ್ಕೆ ‘ನಾನು ನಾನೆಂಬ ಅಹಂಕಾರ, ಮಮಕಾರದ ಮರ್ಮಕ್ಕೆ ಆಘಾತವನ್ನುಂಟು ಮಾಡಿ,

“ಕರ್ತ ಕಾಗಿನೆಲೆಯಾ–

ದಿಕೇಶವ ನಾರಾಯಣನ।ಅರ್ತಿಯಿಂದ ಭಜಿಸಿ ನೀವು ಸುಖಧಿ ಬಾಳಿರೊ॥” ಎಂಬ ಲೋಕದೃಷ್ಟಿ ಬೀರಿದ್ದಾರೆ.

ಈ ದೇಹ ಈ ಜೀವದ ಒಡೆಯನಾದ ಆದಿಕೇಶವನಲ್ಲಿ ಸಂಪೂರ್ಣ ಸಮರ್ಪಿಸಿಕೊಳ್ಳಬೇಕು. ತಲ್ಲಣಗಳ ತಾಪದಲ್ಲಿ ಬೆಂದು ಹೋಗದಂತೆ, ತಾನಾರು? ಈ ದೇಹವಾರು? ಎಂಬುದನ್ನು ತಿಳಿದುಕೊಂಡು ನೀತಿಗೆಡದಂತೆ ದಾನ ಧರ್ಮ ಮಾಡಿ, ಸದಾಶಿವನಿಗೆ ದಾಸರಾಗಿ, ಮನದೊಳಗಿನ ಕಲ್ಮಷವನ್ನು ಕಳೆದುಕೊಂಡು, ದುರ್ಜನರ ಸಂಗದಿಂದ ದೂರವಿದ್ದು ಗುರುನಿಂದೆ, ಪರನಿಂದೆ ಮಾಡದೆ, ಮಾತಪಿತರನ್ನು ಬಳಲಿಸದೆ ಅನ್ನಮದ, ಅರ್ಥಮದ, ಅಧಿಕಾರ ಮದಗಳನ್ನೆಲ್ಲ ತೊರೆದು, ಪಾಪಕರ್ಮ ಮಾಡದೆ, ಕಾಮಕ್ರೋಧಗಳನ್ನು ಕರಗಿಸಿಕೊಂಡು ಸತ್ಯವಂತರ ಸಂಗ ಮಾಡಿ, ಕಾಗಿನೆಲೆಯಾದಿಕೇಶವನ ನೆನೆದು ಸುಖಿಯಾಗೆಂದು ಆದಿಕೇಶವನ ಅಂಕಿತದ ಕೀರ್ತನೆಗಳ ಮೂಲಕ ಹೆದ್ದಾರಿ ತೋರಿಸಿರುವುದು ಕನಕದಾಸರ ಲೋಕದೃಷ್ಟಿಯಾಗಿದೆ.

## ರಾಮಧಾನ್ಯ ಚರಿತ್ರೆ:

ಆಧ್ಯಾತ್ಮದಲ್ಲಿ ಅತ್ಯುನ್ನತಿಯನ್ನು ಸಾಧಿಸಿರುವ ಭಾರತ ಸಾಮಾಜಿಕ ವ್ಯವಸ್ಥೆಯಿಂದ ಪಾತಾಳಕ್ಕೆ ಇಳಿದು ಬಿಡುತ್ತದೆ. ಸಾವಿರಾರು ವರ್ಷಗಳ ಕಾಲ ಜಾತಿ, ವರ್ಣಗಳು ಮೇಲು–ಕೀಳೆಂಬ ಪರಿಕಲ್ಪನೆಯನ್ನು ಹುಟ್ಟು ಹಾಕಿದ ಪಟ್ಟಭದ್ರರು ಮತಿಗಳನ್ನು ಮಾಲಿನ್ಯವಾಗಿಸಿದರು. ಆ ವಿಷಬೀಜ ಬಿತ್ತನೆಯ ಬೆಳೆಯನ್ನು ನಾಶ ಮಾಡುವ ಸಲುವಾಗಿ ಈ ಭೂಮಿಯಲ್ಲಿ ಏನೆಲ್ಲ ಮಹಾತ್ಮರು ದಾರ್ಶನಿಕರು ಜನಿಸಿ, ಕ್ರಿಯಾಶೀಲರಾದರೂ ಕೂಡ 'ಜಾತಿ' ಎಂಬ ವಿಷಬೀಜವನ್ನು ನಾಶಗೊಳಿಸಲಾಗಿಲ್ಲ. ಈ ವಿಷಬೀಜದ ಬೆಳೆಯು ಗಾಳಿಯಂತೆ ಎಲ್ಲೆಲ್ಲೋ ಪಸರಿಸಿ, ಶಾಂತಿ–ನೆಮ್ಮದಿಯ ಬದುಕಿಗೆ ಭಂಗ ತರುತ್ತಲೇ ಇದೆ.

ಭಾರತೀಯರ ಬಹುತೇಕ ಮತಿಗಳು ಈ ಮಾಲಿನ್ಯಕ್ಕೆ ಆಶ್ರಯದ ತಾಣಗಳಾಗಿವೆ.ಮೇಲ್ನೋಟಕ್ಕೆ ಜಾತ್ಯಾತೀತರಂತೆ ಕಾಣುತ್ತಲೆ ಒಳಗೊಳಗೆ ಜಾತಿಯ ಆರಾಧಕರು ಶತಶತಮಾನಗಳಿಂದಲೂ ನುಸುಳಿಕೊಂಡು ಬಂದಿದ್ದಾರೆ. ಬುದ್ಧ, ಬಸವಣ್ಣ, ಕನಕದಾಸರು, ಅಂಬೇಡ್ಕರ್ ಮೊದಲಾದವರು ಜಾತಿ ನಾಶಕ್ಕಾಗಿ ಹೋರಾಡಿದರು. ಅದರ ಅನರ್ಥ ಆಚರಣೆಯನ್ನು ವಿಶ್ಲೇಷಿಸಿ, ವಿವರಿಸಿದರು. ಮಲಿನಮತಿಗಳು ನಿರ್ಮಲವಾಗುವುದರ ಬದಲು,ಮತ್ತಷ್ಟು ಗಟ್ಟಿಗೊಳ್ಳುತ್ತಿರುವುದು ದುರಂತವೇ ಸರಿ.

ಕೀರ್ತನೆಗಳ ಮೂಲಕ ಜಾತಿಯ ನಶ್ವರತೆಯನ್ನು ತಿಳಿಸುವ ಕನಕದಾಸರು 'ರಾಮಧಾನ್ಯ ಚರಿತ್ರೆ' ಕಾವ್ಯದಲ್ಲಿ ಜಾತಿಯ ಕರಾಳ ರೂಪವನ್ನು ಬಯಲುಗೊಳಿಸಿರುವರು. ಸ್ವಯಂ ಕಲ್ಪಿಸಿಕೊಂಡ ಕಥನಕ್ಕೆ ರಾಮಾಯಣವನ್ನು ಬೆನ್ನೆಲುಬಾಗಿಸಿಕೊಂಡು ಭಾಮಿನಿ ಷಟ್ಪದಿಯಲ್ಲಿ 158 ಪದ್ಯಗಳ ಮೂಲಕ 'ರಾಮಧಾನ್ಯ ಚರಿತ್ರೆ' ಕಾವ್ಯವನ್ನು ಹೆಣೆದಿರುವರು.

"ಶ್ರೀರಮಾಪತಿ ಸಿಂಧುಶಯನಮು

ರಾರಿ ಮುನಿಕುಲ ಪೂಜಿತಾಂಘ್ರಿಸ

ರೋರುಹಾಕ್ಷ ಸುದರ್ಶನಾಂಕಿತ ದೇವ ಭವದೂರ

ಮಾರಪಿತ ಕೌಸಲಾದೇವಿ ಕು

ಮಾರ ರಘುಕುಲ ರಾಮನೃಪ ವರ

ಪೌರ ಚೆನ್ನಿಗರಾಯ ಪಾಲಿಸು ಸಕಲ ಸಜ್ಜನರ"–ಎಂದು ಆರಂಭವಾಗುವ ಈ ಕಾವ್ಯದೊಳಗೆ ಸಮಕಾಲೀನ ಸಾಮಾಜಿಕ ಸಂಘರ್ಷವನ್ನು ಪುರಾಣ ಕಥೆಯ ಲೇಪನದೊಂದಿಗೆ ಚಿತ್ರಿಸಿರುವರು. ಜೂಜಿನಿಂದ ತನ್ನ ಪಾಲಿನ ಭೂಮಿಯನ್ನೆಲ್ಲ

ಕಳೆದುಕೊಂಡು ಅರಣ್ಯದಲ್ಲಿದ್ದ ಧರ್ಮರಾಯ ಮತ್ತು ಆತನ ಸಹೋದರರಿಗೆ ಶಾಂಡಿಲ್ಯಮುನಿ ದರ್ಶನ ನೀಡಿ, ಈ ಧರಣಿಯನ್ನು ಆಳಿದ ಸತ್ಯಾನಿಷ್ಠ ಅರಸರುಗಳಲ್ಲಿ ನಳನೃಪ, ಧೀರರಾಮ, ಯುಧಿಷ್ಠರ, ಹರಿಶ್ಚಂದ್ರ ಈ ನಾಲ್ವರು ಧರಣಿಯನ್ನು ಸತ್ಯನಿಷ್ಠೆಯಿಂದ ಆಳಿದ ಶ್ರೇಷ್ಠ ರಾಜರೆಂದು ಇಡೀ ಜಗವೇ ಹೇಳುತ್ತಿದೆಂದು ಹೇಳಿ "ರಘುಪತಿಯು ಗುಣಾಹಾರ ಧರ್ಮವ ಪಾಲಿಸಿದ ನರೆದಲೆಗ ವ್ರಿಹಿಯರಿಗೆ" ಎಂದರು. ಆಗ ಯುಧಿಷ್ಠರನ ಅಭಿಲಾಷೆಯಂತೆ ರಾಮಾಯಣ ಕಥೆಯನು ಹೇಳಿದ ಮುನಿಯು, ಕಾವ್ಯದ ಕೇಂದ್ರಶಕ್ತಿಯಾದ ರಾಗಿ–ಭತ್ತದ ಸಂಭಾಷಣೆಯತ್ತ ಸಾಗಿ, ರಾಗಿ ಮಹತ್ವವನ್ನು ಸಾರಿ, ರಾಗಿ–ಭತ್ತ ಸಾಮರಸ್ಯದೊಳಗೆ ಬಾಳುವಂತೆ ಸದಾಶಯವನ್ನು ರಾಮನ ಮೂಲಕ ಅಭಿವ್ಯಕ್ತಿಸುವುದರೊಂದಿಗೆ ಆರಂಭದ ಆಶಯಕ್ಕೆ ಅನುಗುಣವಾಗಿ ಮುಕ್ತಯವಾಗುವುದು.

"ಶ್ರೇಷ್ಠತೆಯ ವ್ಯಸನ, ಮೇಲುಕೀಳು ಎಂಬ ಅಪಕಲ್ಪನೆಗಳು, ನಿರಂತರವಾಗಿ ಮುಂದುವರಿದುಕೊಂಡು ಬಂದಿವೆ. ಇಂಥ ಅನಿಷ್ಟ ಪದ್ಧತಿಯಿಂದ ಬಿಡುಗಡೆ ಪಡೆಯುವ ಹಂಬಲವನ್ನು 'ರಾಮಧಾನ್ಯ ಚರಿತ್ರೆ'ಯಲ್ಲಿ ವ್ಯಕ್ತಪಡಿಸಲಾಗಿದೆ. ಇದನ್ನು ನಾಟಕೀಯ ಮಾದರಿಯಲ್ಲಿ ಕನಕದಾಸರು ನಿರೂಪಿಸಿದ್ದಾರೆ---'ರಾಮಧಾನ್ಯ ಚರಿತ್ರೆ' ಎನ್ನುವುದು ರಾಮಧ್ಯಾನ ಚರಿತ್ರೆಯೂ ಹೌದು.ಕನಕದಾಸರಿಗೆ ರಾಮನ ಬಗ್ಗೆ ಗೌರವವಿದೆ; ಭಕ್ತಿಯಿದೆ. ಪ್ರಥಮ ಹಂತದಲ್ಲಿ ಕನಕದಾಸರು ರಾಮನ ಧ್ಯಾನವನ್ನು ಮಾಡುತ್ತಾರೆ. ಅನಂತರದಲ್ಲಿ ಕನಕನ ಆಹ್ವಾನಕ್ಕೆ ಒಲಿದು ಬಂದಂತಹ ರಾಮ 'ರಾಮಧಾನ್ಯ ಚರಿತ್ರೆಯಲ್ಲಿ ಮುಂದುವರಿಯುತ್ತಾನೆ. ಆ ಕಾರಣದಿಂದ ಇದೊಂದು ಅನೋಕ್ತಿ ಕಥನವಾಗಿದೆ''8. ರಾಮ, ರಾಗಿ, ಭತ್ತ, ದೇವಗಣ, ಮುನಿಗಣಗಳು ಪ್ರಮುಖ ಪಾತ್ರಗಳಾಗಿ ಭಾಗವಹಿಸುತ್ತವೆ. ಈ ಕಾವ್ಯ ಕಥನವನ್ನು ಸೂಕ್ಷ್ಮವಾಗಿ ಗಮನಿಸಿದರೆ ಇದೊಂದು ರೀತಿ ಕನಕದಾಸರ ಆತ್ಮಕಥನವೇನೊ ಎಂಬಂತಿದೆ. ಗುರುವ್ಯಾಸರಾಯರು ಶ್ರೀರಾಮನಂತೆ, ಕನಕದಾಸರು ರಾಗಿಯಾಗಿ, ಮಡಿವಂತಿಕೆಯಿಂದಿರುವ ವ್ಯಾಸಕೂಟದವರು ಭತ್ತವಾಗಿ, ದೇವಗಣ ಮುನಿಗಣವು ಜನಸಮೂಹವಾಗಿ ಪಾಲ್ಗೊಳ್ಳುತ್ತಿರುವಂತೆ ಭಾಸವಾಗುತ್ತದೆ.

ರಾಗಿಯ ಶ್ರೇಷ್ಠತೆಯನ್ನು ಸಾರಿದಂತೆಯೇ ಕನಕದಾಸರ ಶ್ರೇಷ್ಠತೆಯನ್ನು ಗುರುವ್ಯಾಸರಾಯರು ಸಾರುವುದನ್ನು ಹಾಗೂ ಕನಕದಾಸರ ತತ್ವ–ಸತ್ವವನ್ನು ಪರಿಚಯಿಸುವುದನ್ನು ಕಾಣಬಹುದು. ಬಹುಜನತೆಯ ಹಿತಕ್ಕೆ ಬದುಕುವ ಬಾಳು, ಶ್ರೇಷ್ಠ ಬಾಳೆಂಬುದನ್ನು, ತಾವೇ ಶ್ರೇಷ್ಠವೆಂದು ಒಣ ಜಂಭದವರು ಸತ್ವ–ತತ್ವಗಳಿಲ್ಲದೇ ಬಾಳುವ ಬಾಳು ಹಾಳಾಗುವುದೆಂಬ ತಿಳಿವನ್ನು, ಯಾವುದು ಕನಿಷ್ಟವೆಂದು, ಕೀಳೆಂದು ಅಸಹ್ಯವೆಂದು ಜರಿಯುತ್ತಿರುವರೊ ಅದೇ ಶ್ರೇಷ್ಠವಾಗುವ, ಸಹ್ಯವಾಗುವ ಪರಿಯ ಅನಾವರಣ ಇಲ್ಲಿದೆ.

ರಾಗಿ–ಭತ್ತದ ನಡುವಿನ ದೋಷಣೆಗಳು, ನಿಂದನೆಗಳು, ಮೂದಲಿಸುವಿಕೆಗಳಿಂದಲೇ ಅವುಗಳ ಸಂಕುಚಿತತೆ ಮತ್ತು ವಿಶಾಲತೆಯ ಪರಿಚಯವಾಗುತ್ತದೆ. ಭತ್ತವು ರಾಗಿಗೆ ನೀಚ ಕುಲದವನು, ಶೂದ್ರಾನ್ನ ಅಗೌರವಿ, ಅಪಾತ್ರ, ಅವಿವೇಕಿ, ಮತಿಹೀನ ಎಂದೆಲ್ಲ ಬೈಯುವುದು. ಅಲ್ಲದೆ ತನ್ನನ್ನು ಆತ್ಮ ಪ್ರಶಂಸೆ ಮಾಡಿಕೊಳ್ಳುವುದು.

ರಾಗಿಯು ಭತ್ತವನ್ನು ಕುರಿತು ಕುಟಿಲಾತ್ಮ, ಶ್ರೀಮಂತರ ಪರವಾಗಿರುವ ಪಕ್ಷಪಾತಿ, ಬಾಣಂತಿ, ರೋಗಿಗಳ ಪಥ್ಯ, ಹೆಣದ ಬಾಯಿಗೆ, ಪಿಂಡಕ್ಕೆ, ಕಾಗೆಗಳಿಗೆ ಅರ್ಹನಾದವ, ದುರಾತ್ಮ, ಬರಗಾಲದಲ್ಲಿ ಕಾಣೆಯಾದವನು ಎಂದೆಲ್ಲ ಬೈಯುವುದು. ಇವೆರಡರ ಸಂಘರ್ಷದಲ್ಲಿ ಭತ್ತದ ಆರ್ಭಟವೇ ಹೆಚ್ಚು.

ಸಾಮಾಜಿಕ ವ್ಯವಸ್ಥೆ ಮತ್ತು ವ್ಯಕ್ತಿಯಲ್ಲಿನ ಅಂತರಂಗ ಮತ್ತು ಬಹಿರಂಗಗಳನ್ನು ಅನಾವರಣಗೊಳಿಸಿ ತದನಂತರದ ತಿಳಿವು ಹೀಗಿದೆ:

"ನೀವು ಧರೆಯೊಳಗಿಬ್ಬರತಿ ಹಿತದಲ್ಲಿ ನೀವಿಹುದು।ನಾವು ಕೊಟ್ಟೆವು ವರವ ಸಲ್ಲುವುದಾವ ಕಾಲದಲ್ಲಿನ್ನು ನೀವೇ।ಪಾವನರು ಪರಮಸುಖಿಯೆಂದುಪಚರಿಸಿ– ದನು ನೃಪತಿ"–ಹೀಗೆ ರಾಗಿ–ಭತ್ತವನ್ನು ಸಾಮರಸ್ಯದೊಳಗೆ ಬೆಸೆಯುವಂತಹ ಕಾರ್ಯ ಮಾಡುವವನು ಶ್ರೀರಾಮ. ಇಂದು ಶ್ರೀರಾಮನಂಥ ಪ್ರಭುಗಳು, ವ್ಯಾಸರಾಯರಂಥ ಗುರುಗಳು ಅತಿ ಅಗತ್ಯವೆಂಬುದನ್ನು ಈ ಕಾವ್ಯ ಪ್ರತಿಪಾದಿಸುತ್ತದೆ. ಪ್ರತಿಯೊಬ್ಬನ ಮನದಾಳದಲ್ಲಿರುವ ಭಿನ್ನತೆಗಳನ್ನು ಹೊರದೂಡಿ, ಐಕ್ಯತೆಯೊಳಗೆ ಬಾಳಬೇಕೆಂಬ ತಿಳಿವನ್ನು ಈ ಕಾವ್ಯ ನೀಡುತ್ತದೆ. ಪೌರಾಣಿಕ– ಸಾಮಾಜಿಕ–ಆಧ್ಯಾತ್ಮಿಕ–ಧಾರ್ಮಿಕಗಳ ಸಮನ್ವಯದೊಂದಿಗೆ ಅರಳಿರುವ ಈ ಕಾವ್ಯದಿಂದ ಕನಕದಾಸರ ಜಾತ್ಯಾತೀತ ಮನೋಭಾವ, ಸಾಮಾಜಿಕ ನ್ಯಾಯದ ಪ್ರತಿಪಾದನೆ, ಜಾತಿಸಾಮರಸ್ಯ, ಮಾನವೀಯಮೌಲ್ಯಗಳ ಪ್ರತಿಪಾದನೆ, ಸಮಾನತೆಯ ಪ್ರತಿಪಾದನೆಗಳು ಅವರ ಲೋಕದೃಷ್ಟಿಗೆ ಹಿಡಿದ ಕನ್ನಡಿಯಾಗಿವೆ.

## ಮೋಹನ ತರಂಗಿಣಿ:

ಕನಕದಾಸರ 'ಮೋಹನ ತರಂಗಿಣಿ' ಶೃಂಗಾರರಸ ಪ್ರಧಾನವಾದ ಕಾವ್ಯ. ಸಾಂಗತ್ಯದಲ್ಲಿರುವ ಈ ಕಾವ್ಯದ ವಸ್ತುವನ್ನು ಮಹಾಭಾರತ, ಭಾಗವತ, ವಿಷ್ಣುಪುರಾಣ, ಸ್ಕಂದ ಪುರಾಣ ಹರಿವಂಶ– ಮೊದಲಾದ ಕೃತಿಗಳ ಮೂಲದಿಂದ ಆಯ್ಕೆ ಮಾಡಿಕೊಂಡು, ತಮ್ಮ ಪ್ರತಿಭೆ ಮತ್ತು ಪಾಂಡಿತ್ಯದ ನೆಲೆಯಲ್ಲಿ ರಚಿಸಿರುವರು.

41ಪದ್ಯಗಳ ಪೀಠಿಕಾ ಸಂಧಿ, 57ಪದ್ಯಗಳ ಸೌರಾಷ್ಟ್ರ ವರ್ಣನೆ ಸಂಧಿ, 71 ಪದ್ಯಗಳ ದ್ವಾರಕಾಪುರ ವರ್ಣನೆ ಸಂಧಿ, 93ಪದ್ಯಗಳ ಕಂದರ್ಪ ಜನನ ಸಂಧಿ, 63ಪದ್ಯಗಳ ಕಾಮನಿಗೆ ದೇವತೆಗಳ ಬೋಧೆ, ಸಂಧಿ, 55ಪದ್ಯಗಳ ಮನ್ಮಥನ ದಂಡೆಯಾತ್ರೆ ಸಂಧಿ, 44ಪದ್ಯಗಳ ಕಾಮದಹನ ಸಂಧಿ, 50ಪದ್ಯಗಳ ರತಿಯ ಪ್ರಲಾಪಸಂಧಿ, 47ಪದ್ಯಗಳ ರತಿಯು ಶಂಬರಾಸುರನ ಪಟ್ಟಣಕ್ಕೆ ಹೋದದ್ದು ಸಂಧಿ, 44ಪದ್ಯಗಳ ರತಿಶಂಬರಾಸುರರ ಸಂಧಾನ ಸಂಧಿ–ಹೀಗೆ 42 ಸಂಧಿಗಳನ್ನು 2699 ಪದ್ಯಗಳಲ್ಲಿ ವ್ಯಾಪಿಸಿಕೊಂಡಿದೆ 'ಮೋಹನ ತರಂಗಿಣಿ' ಕಾವ್ಯ. ಇದೊಂದು ವರ್ಣಕ ಕಾವ್ಯ.

"ಮಾಣದರಸುವಂತೆ ಮಡಗದಿರಧಿಕ ಸು

ಜಾಣರ ಜ್ಞಾನ ಲೋಚನಕ್ಕೆ

ಕಾಣಬರ್ಪಂತೆ ಕನ್ನಡ ವಾಕ್ಯದಲ್ಲಿ ನಾರಾ

ಯಣನ ಸತ್ಕೃತಿಯ ವಿಸ್ತಿರಿಸು"–ಎಂದು ಹೇಳುವ ಮೂಲಕ ಕನ್ನಡ ಭಾಷೆಯ ಮಹತ್ತನ್ನು ಸಾರಿದ್ದಾರೆ. ಅಲ್ಲದೆ ಅಪ್ಪಟ ಗ್ರಾಮೀಣರಿಗೆ, ಸಂಸ್ಕೃತ ಭಾಷೆಯಿಂದ ವಂಚಿತವಾಗಿರುವ ಸಮುದಾಯಕೆ ಆಧ್ಯಾತ್ಮದ ಅನುಭಾವದ ನಿಧಿ ದೊರೆಯಬೇಕೆಂಬ ಹೃದಯಸ್ಥ ಕಾಳಜಿ ಇಲ್ಲಿ ವ್ಯಕ್ತವಾಗಿರುವಲ್ಲಿ ಅವರ ಲೋಕದೃಷ್ಟಿಯನ್ನು ಕಾಣಬಹುದು.

ಶಿವ–ಪಾರ್ವತಿ,ಪ್ರದ್ಯುಮ್ನ–ರತಿ,ಅನಿರುದ್ಧ–ಉಷೆ–ಇವರುಗಳ ಪ್ರೇಮವಿವಾಹ, ಕೃಷ್ಣರುಕ್ಮಿಣಿಯರ ಸುಖದಾಂಪತ್ಯದ ಕತೆಯೇ ಮೋಹನ ತರಂಗಿಣಿಯ ಕಥಾವಸ್ತು. ಲೋಕಕಲ್ಯಾಣಕ್ಕಾಗಿ ಶಿವನೊಂದಿಗೆ ಪಾರ್ವತಿಯನ್ನು ಸೇರಿಸುವ ಸಲುವಾಗಿ ಮನ್ಮಥ ಶಿವನ ತಪಸ್ಸಿಗೆ ಭಂಗವನ್ನುಂಟು ಮಾಡುವನು. ತಪಸ್ಸಿನಿಂದ ಎಚ್ಚೆತ್ತ ಶಿವ ನಿರಪರಾಧಿ ಮನ್ಮಥನನ್ನು ಕೆಂಗಣ್ಣಿನಿಂದ ದಹಿಸುವನು. ವಿಧವೆ ರತಿಯನ್ನು ಶಿವ–ಪಾವರ್ತಿಯರು ಸಂತೈಸುವರು. ಪತಿಯೊಂದಿಗೆ ಸೇರಿಸುವ ಭರವಸೆ ನೀಡುವರು. ಕೃಷ್ಣ–ರುಕ್ಮಿಣಿಗೆ ಜನಿಸಿದ ಮಗುವೆ ಮನ್ಮಥನಾದ ಪ್ರದ್ಯುಮ್ನ ಇವನಿಂದಲೇ ಮರಣವೆಂಬುದನ್ನು ಅರಿತ ಶಂಬರಾಸುರ, ಹತ್ತು ದಿನದ ಪ್ರದ್ಯುಮ್ನ ಮಗುವನ್ನು ಅಪಹರಿಸಿಕೊಂಡು, ನದಿಯಲ್ಲಿ ಎಸೆಯುವನು. ಈ ಮಗುವನ್ನು ಮೀನು ನುಂಗುವುದು. ಪತಿಗಾಗಿ ಪರಿತಪಿಸುತ್ತಿದ್ದ ರತಿ ಶಂಬರಾಸುರನ ನಾಡಿಗೆ ಬರುವಳು. ಅವಳ ಸೌಂದರ್ಯಕ್ಕೆ ಮನಸೋತ ಶಂಬರಾಸುರ

ರತಿಯನ್ನು ಒಲಿಸಿಕೊಳ್ಳಲು ಪ್ರಯತ್ನಿಸುವನು. ಅದು ವಿಫಲವಾದಾಗ ರತಿಯನ್ನು ಅಡುಗೆ ಕೆಲಸಕ್ಕೆ ನೇಮಿಸಿಕೊಳ್ಳುವನು. ಮೀನುಗಾರರಿಂದ ಪ್ರದ್ಯುಮ್ನ ಶಿಶು ನುಂಗಿದ ಮೀನು ಶಂಬರಾಸುರನ ಅಡುಗೆ ಕೋಣೆ ಸೇರುವುದು. ಆ ಮೀನಿನ ಒಳಗಿರುವ ಮಗು ಮನ್ಮಥನೆಂದು ತಿಳಿದು ಸಾಕುವಳು. ಆ ಮಗು ಬೆಳೆದು ಶಂಬರಾಸುರನನ್ನು ಕೊಂದಿತು. ರತಿಯನ್ನು ಪ್ರದ್ಯುಮ್ನ ವಿವಾಹವಾದ. ಇವರಿಬ್ಬರಿಗೆ ಜನಿಸಿದವನೆ ಅನಿರುದ್ಧ. ಇವನು ಬಾಣಾಸುರನ ಮಗಳಾದ ಉಷೆಯನ್ನು ಪ್ರೀತಿಸುವನು. ಇದಕ್ಕೆ ಬಾಣಾಸುರನು ಅಡ್ಡಿಪಡಿಸುವನು. ಕೃಷ್ಣ ಅವನೊಡನೆ ಕಾಳಗ ಮಾಡಿ, ಸೊಕ್ಕು ಮುರಿಯುವನು. ಶಿವನು ಮಧ್ಯಸ್ಥಗಾರನಾಗಿ ಭಾಗವಹಿಸಿ, ಉಷಾ–ಅನಿರುದ್ಧರ ವಿವಾಹ ಜರುಗುವಂತೆ ಮಾಡುವನು. ಸುಖಾಂತ್ಯವಾಗುವ ಈ ಕಾವ್ಯದ ಮೂಲಕ ಕನಕದಾಸರು ವೈಷ್ಣವ–ಶೈವ ಧರ್ಮವನ್ನು ಸಮನ್ವಯಗೊಳಿಸುವ, ಹರಿಹರ ಶಕ್ತಿಯು ಸತ್ಕಾರ್ಯಕ್ಕೆ, ದುಷ್ಟರನ್ನು ಶಿಕ್ಷಿಸುವುದಕ್ಕೆ ಐಕ್ಯವಾಗುವ ಬಗೆಯನ್ನು ಚಿತ್ರಿಸಿದ್ದಾರೆ. ಪಾಪಿ, ತನ್ನ ತಪ್ಪುಗಳನ್ನು ಒಪ್ಪಿಕೊಂಡು ನಿರ್ದೋಷಿಯಾಗುವ ಬಗೆಯನ್ನು ಬೆರಗುಗೊಳಿಸುವಂತೆ ಬಾಣಾಸುರನನ್ನು ಕೈಲಾಸಕ್ಕೆ ಕೊಂಡು ಹೋಗುವ ಮೂಲಕ ಮನವರಿಕೆ ಮಾಡಿದ್ದಾರೆ.

ಮಾಡಿದ ಪಾಪಗಳ ಮನವರಿಕೆಯಿಂದ, ಸಂಸ್ಕಾರದಿಂದ ದುಷ್ಟರನ್ನು ಶಿಷ್ಟರನ್ನಾಗಿಸಬಹುದೆಂಬ ತಿಳಿವು ಇಲ್ಲಿದೆ. ಕೀಳು, ನೀಚ, ಹೀನ, ಕನಿಷ್ಟ ಎನ್ನುವುದನ್ನು ಮೇಲು, ಉಚ್ಛ, ಶ್ರೇಷ್ಠವಾಗಿಸುವ ಪ್ರಕ್ರಿಯೆಯ ಸೂಕ್ಷ್ಮ ಎಳೆಗಳನ್ನು ಕನಕದಾಸರು ಪರಿಚಯಿಸುವ ಮೂಲಕ ಸಾಮಾಜಿಕ ಸಂಬಂಧಗಳಿಗೆ, ವೈವಾಹಿಕ ಸಂಬಂಧಗಳಿಗೆ ಧರ್ಮಗಳು ಅಡ್ಡಗೋಡೆಯಾಗ–ಬಾರದು, ಹರನಾಗಲಿ, ಹರಿಯಾಗಲಿ ಶತ್ರುಗಳಲ್ಲ. ಅವರಿಬ್ಬರು ಒಬ್ಬರೇ ಎಂಬುದನ್ನು ತಿಳಿಸಿರುವರು. ಸಂಬಂಧಗಳ ಸಂವರ್ಧನೆಗೆ ಅತಿ ಅಗತ್ಯವಾದ ಪ್ರೀತಿಯನ್ನು ಸಂಪಾದಿಸಿ, ಸದಾ ಸುಖಿಗಳಾಗಿರಬೇಕೆಂಬ ಲೋಕದೃಷ್ಟಿಯನ್ನು ಪೌರಾಣಿಕ ನೆಲೆಯಲ್ಲಿ ಕಟ್ಟಿಕೊಟ್ಟಿದ್ದಾರೆ ಕನಕದಾಸರು. ಭೋಗ–ಯೋಗದ ಸಮನ್ವಯವನು ಕನಕದಾಸರು ಎತ್ತಿ ಹಿಡಿದಿದ್ದರೂ ಕೂಡಾ ಭೋಗ ಅತಿರೇಕವಾಗದೆ, ಯೋಗದೆಡೆಗೆ ಸಾಗುವಂತೆ ಪ್ರೇರೇಪಿಸಿದ್ದಾರೆ. ಶೃಂಗಾರದಲ್ಲಿ ಜೀವನ ಸಿಂಗಾರ ಕಾಣುವ, ಅನುಭವಿಸುವ ಹೆದ್ದಾರಿಯನ್ನು ತೋರಿಸಿದ್ದಾರೆ ಕನಕದಾಸರು.

"ಮೋಹನ ತರಂಗಿಣಿ" ಕೃಷ್ಣಭಕ್ತಿ, ಭಾಗವತ ಪ್ರಚಾರಕ್ಕೆ ಮಾತ್ರ ಮೀಸಲಾಗಿರದೆ ತನ್ನ ಸಮಕಾಲೀನ ಸಾಮಾಜಿಕ ಜೀವನದ ಜೊತೆಗೆ ಧರ್ಮ ಹಾಗೂ ಸಂಸ್ಕೃತಿಯ ಬಗೆಗಿರುವ ಕವಿಯ ಕಳಕಳಿಯು ದಾಖಲೆಯಾಗಿ ಶತ ಶತಮಾನಗಳವರೆಗೂ ತನ್ನ ಮಹತ್ವವನ್ನು ಉಳಿಸಿಕೊಂಡು ಬಾಳಬಲ್ಲ ಕೃತಿಯಾಗಿದೆ. ತನ್ನ ಸಮಕಾಲೀನ ಸಮಾಜ ಹಾಗೂ ಧರ್ಮಕ್ಕೆ ಸಂಬಂಧಿಸಿದಂತೆ ತನ್ನ ಸಂದೇಶವನ್ನು ಪರ್ಯಾಯವಾಗಿ ಜನದೆಡೆಗೆ ಮುಟ್ಟಿಸಲು ಅನುಕೂಲವಾಗುವಂತೆ, ಆಯ್ಕೆ ಮಾಡಿಕೊಂಡ ವಸ್ತುವನ್ನು ಮೊದಲುಗೊಂಡು ನಿರೂಪಿಸಿದ ರಸ, ಬಳಸಿಕೊಂಡ ಛಂದಸ್ಸಿನವರೆಗೂ ಕನಕದಾಸನ ಬುದ್ಧಿವಂತಿಕೆ ಕೆಲಸ ಮಾಡಿದೆ"9 ಕನಕದಾಸರು ಸ್ತ್ರೀ ಪರವಾದ ನಿಲುವುಗಳನ್ನು ಅವರಲ್ಲಿರಬೇಕಾದ ನಯ–ವಿನಯ, ಭಯ–ಭಕ್ತಿಗಳನ್ನು ತಿಳಿಸುವ ಮೂಲಕ ಅಭಿವ್ಯಕ್ತಿಸಿರುವರು.

## ನಳಚರಿತ್ರೆ:

ಕನಕದಾಸರಿಗೆ ಸಮಾಜದ ಬಗ್ಗೆ ಹೆಣ್ಣು–ಗಂಡುಗಳ ಬಗ್ಗೆ ಇದ್ದ ಕಾಳಜಿ ಅಪೂರ್ವವಾದುದು. ಸಮಾಜ ಸಂಸ್ಕೃತಿಯು ನಿರ್ಮಿಸುವ ಅದನ್ನು ಆಗಾಗ್ಗೆ ಪರಿಶೀಲಿಸಿ, ಪರಿಶೋಧನೆಗೊಳಿಸುವ ಚೈತನ್ಯಶಕ್ತಿ ಗಂಡು–ಹೆಣ್ಣಿನಲ್ಲಿ ಅಡಗಿದೆ. ಅವರಲ್ಲಿನ ಕಾಮವು ಪ್ರೇಮವಾಗಬೇಕು. ಅದು ಮುಂದೆ ದೈವೀ ಪ್ರೇಮವಾಗಬೇಕೆಂಬ ಆದಮ್ಯ ಆಕಾಂಕ್ಷೆಯ ಫಲವಾಗಿಯೇ 'ನಳಚರಿತ್ರೆ' ಯನ್ನು ರಚಿಸಿ, ಸ್ತ್ರೀ ಪುರುಷರ ಚಾರಿತ್ರ್ಯಕ್ಕೆ ನೈತಿಕತೆಯ ಸ್ಪರ್ಶವನ್ನು ಮಾಡಿಸುತ್ತಾರೆ. ಪುರುಷಮಣಿಯ ಸಂಗದಿಂದ ಕಬ್ಬಿಣವು ಚಿನ್ನವಾಗುವಂತೆ, ಉದಾತ್ತ ಚಾರಿತ್ರ್ಯದ ಚರಿತ್ರೆಯನ್ನು ಹೇಳುವ ಮೂಲಕ ಉದಾತ್ತ ವ್ಯಕ್ತಿತ್ವದ ಸಂಪಾದನೆಗೆ ಪ್ರೇರಕ ಶಕ್ತಿಯಾಗಿದ್ದಾರೆ ಕನಕದಾಸರು.

"ಸಂಸ್ಕೃತ ಮಹಾಭಾರತದ ವನಪರ್ವದಲ್ಲಿ ಬರುವ ನಳೋಪಾಖ್ಯಾನವೇ ಕನ್ನಡದಲ್ಲಿ ನಳದಮಯಂತಿಯರ ಸಾಹಿತ್ಯ ರಚನೆಗೆ ಮೂಲವಾಗಿದೆ. ಕಾಲಾನುಕಾಲದಿಂದ ಈ ಕಥೆ ಜನಮನವನ್ನು ಹಿಡಿದಿಡಲು ನಳನ ಶ್ರೇಷ್ಠಗುಣ, ಕಷ್ಟಸಹಿಷ್ಣುತೆ, ದಮಯಂತಿಯ ಧೈರ್ಯ, ಅಮರಪ್ರೇಮ ಮೂಲ ಕಾರಣವಾಗಿದೆ. ಈ ಕಥೆ ಭಾರತೀಯ ಭಾಷೆಗಳಿಗಷ್ಟೇ ಅಲ್ಲ, ಜಗತ್ತಿನ ಪ್ರಮುಖ ಭಾಷೆಗಳಾದ ಇಂಗ್ಲೀಷ್, ಫ್ರೆಂಚ್, ಜರ್ಮನ್, ಇಟಾಲಿಯನ್, ಸ್ವೀಡಿಸ್, ಸೆಕ್, ಪೋಲಿಷ್, ರಷಿಯನ್, ಗ್ರೀಕ್ ಮತ್ತು ಹಂಗೇರಿ ಭಾಷೆಗಳಲ್ಲಿ ಕಾಣಿಸಿಕೊಂಡಿದೆ. ಈ ಕಥೆಯ ಶ್ರೇಷ್ಠತೆ ಮತ್ತು ಸೊಗಸ್ಸೇ ವಿಶ್ವಸಾಹಿತ್ಯದ ಕಥಾರತ್ನಗಳಲ್ಲಿ ಒಂದೆಂದು ಪರಿಗಣಿಸಲು ಕಾರಣವಾಗಿದೆ. ಈ ಕಥೆಯನ್ನೆತ್ತಿಕೊಂಡು ಕನ್ನಡದಲ್ಲಿ ಚೌಂಡರಸ, ಕನಕದಾಸ, ಶಾಲ್ಯದ ಕೃಷ್ಣರಾಯ, ಕೆಂಪಯ್ಯ, ಮುಮ್ಮಡಿ ಕೃಷ್ಣರಾಜ ಒಡೆಯರು, ಬಸವಪ್ಪಶಾಸ್ತ್ರಿ, ಕೆರೂರು ವಾಸುದೇವಾಚಾರ್ಯರು ಗದ್ಯ, ಪದ್ಯ, ನಾಟಕ, ಚಂಪೂ ಮತ್ತು ಯಕ್ಷಗಾನ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಹೇಳಿದ್ದಾರೆ. ನಳನ ಕಥೆಯನ್ನಾಧರಿಸಿ ಸಂಸ್ಕೃತದಲ್ಲಿ ನಲವತ್ತೆರಡು ಕೃತಿಗಳು ರಚಿತವಾಗಿದ್ದರೆ, ಕನ್ನಡದಲ್ಲಿ ಹದಿಮೂರು ಕೃತಿಗಳಿವೆ. ಇದೇ ಈ ಕಥೆಯ ಜನಪ್ರಿಯತೆಯನ್ನು ಹೇಳುತ್ತದೆ"10ವಿಧಿಯ ವಿಲಾಸದಿಂದ ನಳ ಚಕ್ರವರ್ತಿ ಅನುಭವಿಸಿದ ಸಂಕಷ್ಟಗಳು ಕರುಳನ್ನು ಕತ್ತರಿಸುವಂತೆ, ಕೊರಳನ್ನು ಉಬ್ಬಿಸುವಂತೆ ದುಃಖವನ್ನು ಸ್ಥಾಯಿಯಾಗಿಸುತ್ತವೆ. ಅಷ್ಟೇ ಅಲ್ಲದೆ ಆದರ್ಶ ದಾಂಪತ್ಯಕ್ಕೆ ನಳದಮಯಂತಿ ಸಾಕ್ಷಿಯಾಗುತ್ತಾರೆ. ಇಂಥ ಅಪೂರ್ವವಾದ ಕಥಾನಕವನು ಕನಕದಾಸರು ಅಲ್ಪಸ್ವಲ್ಪ ಮಾರ್ಪಾಡುಗಳೊಂದಿಗೆ ಕಣ್ಮುಂದೆ ನಿಲ್ಲುವಂತೆ ಚಿತ್ರಿಸಿರುವರು.

ಭಾಮಿನಿ ಷಟ್ಪದಿಯಲ್ಲಿ 9ಸಂಧಿಗಳ 481 ಪದ್ಯಗಳ ಮೂಲಕ ಈ ಕಾವ್ಯವನ್ನು ಹೆಣೆದಿರುವರು. ಮಕ್ಕಳಿಲ್ಲದ ಭೀಮರಾಜ ಯಾಗ ಮಾಡಿ, ದಮಯಂತಿ ಪಡೆದು, ಬೆಳೆಸಿ, ಸ್ವಯಂವರ ಏರ್ಪಡಿಸಿದ್ದು, ನಳನು ದಮಯಂತಿಯ ಸ್ವಯಂವರಕ್ಕೆ ಹೊರಡುವುದು, ಇಂದ್ರನು ಸ್ವಯಂವರಕ್ಕೆ ಹೋಗುವುದು, ನಳನನ್ನು ದಮಯಂತಿ ಒಲಿಸುವಂತೆ ಕೇಳುವುದು, ಸರ್ಪ ಬಾಯಿ ಸಿಕ್ಕು ಸಾಯುವ ಕ್ಷಣದಲ್ಲಿ ಕಾಪಾಡಿದ ಬೇಡ, ಅವಳನು ಬಯಸಿದಾಗ ಅವನಿಗೆ ತಂದೆ ಸಮಾನವೆಂದು

ಹೇಳಿ ವಿವೇಕ ನೀಡುವುದು, ಅಗಲಿದ ಪತಿಯನ್ನು ಕೂಡುವುದು ಮೊದಲಾದ ಪ್ರಸಂಗಗಳು ತುಂಬಾ ಮನೋಜ್ಞವಾಗಿ ಮೂಡಿ ಬಂದಿವೆ.

ಪಾತಿವ್ರತ್ಯ, ಸತ್ಯನಿಷ್ಠತೆ, ಮಧುರದಾಂಪತ್ಯ ಸದೃಢಮನ, ಸಹನೆ, ತಾಳ್ಮೆ, ಪರಿಶುದ್ಧಪ್ರೇಮ ಮೊದಲಾದ ಮೌಲ್ಯಗಳನ್ನು ಪ್ರತಿಪಾದನೆ ಈ 'ನಳಚರಿತ್ರೆ' ಯಲ್ಲಿದೆ. ಕನಕದಾಸರೆಂದರೆ ಮಾನವೀಯ ಮೌಲ್ಯಗಳ ನಿಧಿ. ನಳ ದಮಯಂತಿಯರನ್ನು ಅಕ್ಷಯವಾಗುವಂತಹ ಮೌಲ್ಯಗಳ ಮೂಲಕ ಜೀವ ತುಂಬಿ, ಸಜೀವ ಪಾತ್ರಗಳಾಗಿ ಓದುಗರ ಹೃನ್ಮನದಲ್ಲಿ ಚಿರಸ್ಥಾಯಿಯಾಗುವಂತಿವೆ. ದಮಯಂತಿ ಲೋಕಸುಂದರಿಯಾರೂ ಕಿಂಚಿತ್ ಅಹಂ ಪ್ರದರ್ಶಿಸಿದವಳಲ್ಲ. 'ನಳ' ಚಕ್ರವರ್ತಿಯಾಗಿದ್ದರೂ ಕೂಡ ಮದವೇರಿದವನಲ್ಲ. ಕಷ್ಟಗಳನ್ನು ಅನುಭವಿಸಿ, ವಿರಹದಿಂದ ಬಳಲಿ, ಬೆಂಡಾದಾಗ ಪ್ರೇಮ, ಪರಿಶುದ್ಧಗೊಳ್ಳುತ್ತದೆಂಬುದನ್ನು ನಳ ದಮಯಂತಿಯರ ಮೂಲಕ ಕಟ್ಟಿಕೊಡುವ ಕನಕದಾಸರು ಪತಿಯೇ ಪರದೈವ ಎಂದು ನಂಬಿಕೊಂಡು ಬಾಳಿದ ದಮಯಂತಿ ಆದರ್ಶನಾರಿ ಎಂಬುದನ್ನು ಚಿತ್ರಿಸಿರುವರು. ಕಲಿಪುರುಷನು ನಳದಮಯಂತಿಗೆ ನೀಡಿದ ಕಷ್ಟಗಳ ಮೂಟೆಯನ್ನು ಅಸೂಯೆ ಪರರು ಹೇಗೆ ಕಾಡುತ್ತಾರೆಂಬುದನ್ನು ಅನ್ವಯಿಸಿಕೊಂಡು ಎಚ್ಚರಿಕೆಯಿಂದ ಬದುಕಲು ಹಾಗೂ ಮೌಲ್ಯಗಳಿಗೆ ಬದ್ಧರಾಗಿ ಬಾಳಲು ಪ್ರೇರೇಪಿಸುತ್ತವೆ. ಹೆಣ್ಣಿದ್ದರೆ ದಮಯಂತಿಯಂತೆ ಇರಬೇಕೆಂಬುದನ್ನು ತಿಳಿಸುವ ಕಾವ್ಯ ನಡೆ–ನುಡಿಯ ಪರಿಶುದ್ಧತೆಗೆ ಒಲವು–ನಿಲುವುಗಳ ಚಿಂತನೆಗೆ, ದುರಾಭ್ಯಾಸ ರಹಿತ ಬಾಳಿಗೆ ಪ್ರಚೋದಿಸುವ ಲೋಕದೃಷ್ಟಿಯನ್ನೊಂದಿದೆ.

## ಹರಿಭಕ್ತಿಸಾರ:

"ಭಕ್ತಿಸಾರದ ಚರಿತೆಯನು ಹರಿ

ಭಕ್ತರಾಲಿಸುವಂತೆ ರಚಿಸುವೆ

ಯುಕ್ತಿಯಲಿ ಬರೆದೋದಿದವರಿಷ್ಟಾರ್ಥ ಸಿದ್ಧಿಪುದು

ಮುಕ್ತಿಗಿದು ನೆಲೆದೋರುವುದು ಹರಿ

ಭಕ್ತರಿದನಾಲಿಸುವುದು ನಿಜಮತಿ

ಭಕ್ತಿಗೊಲಿವಂದದಲಿ ರಕ್ಷಿಸು ನಮ್ಮನನವರತ"–ಎಂದು ಹೇಳುವ ಮೂಲಕ ಹರಿಭಕ್ತಿಸಾರ ಕಾವ್ಯದ ಉದ್ದೇಶವನ್ನು ಕವಿ ಕನಕದಾಸರು ಸ್ಪಷ್ಟಪಡಿಸಿರುವರು.

ಚಿನ್ಮಯ, ದೇವಕಿತನಯ, ರಘುಕುಲವರ್ಯ, ಜಗದೇಕನಾಥ, ಶ್ರೀನರಸಿಂಗ ಮೊದಲಾದ ನಾಮಗಳಲ್ಲಿ ಕೀರ್ತಿಸುತ್ತ ನಿತ್ಯನಿರಂತರ ನಮ್ಮನ್ನು ರಕ್ಷಿಸು ದೇವ ಎಂದು ಬೇಡುವ ಕನಕದಾಸರು ಭಕ್ತಿಯ ಶ್ರೇಷ್ಠತೆಯನ್ನು ಅದರ ಸ್ವರೂಪ, ಅದರ ಪರಿಣಾಮಗಳನ್ನು ತಿಳಿಸಿರುವರು. ಭಾಗವತ ಧರ್ಮ ನವವಿಧ ಭಕ್ತಿಯನ್ನು ಕನಕದಾಸರು ಹೇಳಿರುವುದು ಹೀಗಿದೆ:

"ಕೇಳುವುದ ಹರಿಕಥೆಯ ಕೇಳಲು

ಹೇಳುವುದು ಹರಿಭಕ್ತಿ ಮನದಲಿ

ತಾಳುವುದು ಹಿರಿದಾಗಿ ನಿನ್ನಯ ಚರಣ ಸೇವೆಯಲಿ

ಊಳಿಗವ ಮಾಡುವುದು ವಿಷಯವ

ಹೂಳುವುದು ನಿಜಮುಕ್ತಿಕಾಂತೆಯ

ನಾಳುವುದು ಕೃಪೆಮಾಡಿ ರಕ್ಷಿಸು ನಮ್ಮನನವರತ"–ಹರಿಕಥೆಯ ಕೇಳಿ, ಹೇಳಿ, ಮನನ ಮಾಡುತ್ತಾ ಅರ್ಚನೆ ಮಾಡುತ್ತಾ ವಂದಿಸಿ, ಪಾದಸೇವೆ ಸಖ್ಯದೊಳಗೆ ನಿವೇದಿಸಿ, ನಿಜಮುಕ್ತಿಗಾಗಿ ಆತ್ಮನಿವೇದನೆಯಿಂದ ಸಮರ್ಪಿಸಬೇಕೆಂದಿರುವರು ಕನಕದಾಸರು. ಭಾಮಿನಿ ಷಟ್ಪದಿಯ 108ಪದ್ಯಗಳ ಗುಚ್ಛವಾದ **'ಹರಿಭಕ್ತಿಸಾರ'** ಕಾವ್ಯ ಕನಕದಾಸರ ಭಕ್ತಿಯ ಉತ್ತುಂಗಶಿಖರವನ್ನು ದಾಖಲಿಸಿದೆ. ಭಕ್ತಿಗಂಗೆ ಹೊಳೆಯಾಗಿ ಹರಿದಿದ್ದಾಳೆ. ಪರಮಾತ್ಮನ ಅನುಗ್ರಹಕ್ಕೆ ಹಲವು ಹಾದಿಗಳಿದ್ದರೂ ಅವುಗಳಲ್ಲಿ ಭಕ್ತಿ ಹಾದಿಯು ಅತ್ಯುತ್ತಮವಾದೆಂಬುದನ್ನು ಅರಿತ ಕನಕದಾಸರು ಅದರ ನಿಜರೂಪವನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ. ಭಕ್ತಿಗಂಗೆಯಲ್ಲಿ ಮಿಂದೆದ್ದಾಗ ದೊರೆತ ಫಲವಾಗಿ ಬದುಕು ತೊಡಕಾಗದೆ, ಅಡ್ಡಿ ಆತಂಕಗಳಿಲ್ಲದೆ ಸಾಗಿ ಸಾಗರವ ಸೇರಿರುವ ಹತ್ತು ಹಲವು ಉದಾಹರಣೆಗಳ ನೀಡುವ ಮೂಲಕ ಭಕ್ತಿಯ ಅಪರಿಮಿತವಾದ ಶಕ್ತಿಯನ್ನು ಸಮರ್ಥಿಸಿರುವರು.

ಕನಕದಾಸರದು ಒಣಭಕ್ತಿಯಲ್ಲ, ಡಾಂಭಿಕ ಭಕ್ತಿಯಲ್ಲ. ಅವರದು ಅಚಲವಾದ ಭಕ್ತಿ. ಶ್ರೀಹರಿಯೇ ಅವರ ಉಸಿರು. ಅವನೇ ಅವರ ಸರ್ವಸ್ವ. ಹಾಗಾಗಿ ಶ್ರೀಹರಿಯ ಚೆಲುವು, ಆತನ ಕಾರ್ಯಗಳ ಬಾಹುಳ್ಯ, ದುಷ್ಟರನ್ನು ಶಿಕ್ಷಿಸುವ, ಶಿಷ್ಟರನ್ನು ರಕ್ಷಿಸುವ ಜಾಣ್ಮೆಯನ್ನು ಸ್ಮರಿಸುವರು.

"ದೀನ ನಾನು ಸಮಸ್ತ ಲೋಕಕೆ

ದಾನಿ ನೀನು ವಿಚಾರಿಸಲು ಮತಿ

ಹೀನ ನಾನು ಮಹಾಮಹಿಮ ಕೈವಲ್ಯ ಪತಿ ನೀನು

ಏನ ಬಲ್ಲೆನು ನಾನು ನೆರೆ ಸು

ಜ್ಞಾನ ಮೂರುತಿ ನೀನು ನಿನ್ನ ಸ

ಮಾನರುಂಟೇ ದೇವ ರಕ್ಷಿಸು ನಮ್ಮನನವರತ''–ಮಹಾಮಹಿಮ ಹರಿಯಲ್ಲಿ ಕನಕದಾಸರು ಸರ್ವವನ್ನು ಸಮರ್ಪಿಸಿಕೊಂಡ ದಾಸ್ಯಭಾವವು ವ್ಯಕ್ತವಾಗಿದೆ. ಪಂಚೇಂದ್ರಿಯಗಳ ಕಾಡಾಟದಿಂದ, ಸಂಚಿತಕರ್ಮದಿಂದ, ಕೋಪದ ತನುವಿನಿಂದ, ಪಾಪಕೂಪದಿಂದ, ಮಡದಿಮಕ್ಕಳ ಮೋಹದಿಂದ, ಕಂಟಕರಿಂದ,ನೀರಗುಳ್ಳೆಯಂತಹ ದೇಹದಿಂದ, ಗಾಳಿಗೊಡ್ಡಿದ ಸೊಡರನಂತಹ ಸಂಸಾರದಿಂದ, ಜನ್ಮಜನ್ಮಗಳ  ಸಂಚಾರದಿಂದ ಮುಕ್ತಗೊಳಿಸಿ, ಮುಕ್ತಿಯನ್ನು ನೀಡೆಂದು ಬೇಡುವ ಕನಕದಾಸರು ಲೋಕದ ಜನತೆಯಲ್ಲಿ ಭಕ್ತಿ ವೈರಾಗ್ಯ ಒಡಮೂಡುವಂತೆ ಇಲ್ಲಿ ನಿವೇದಿಸಿರುವವರು.

"ಸತ್ತವರಿಗಳಲೇಕೆ ತನ್ನನು

ಹೆತ್ತವರು ಹೊತ್ತವರುಗಳು ತಾವ್

ಸತ್ತು ಹೋಗುವರಲ್ಲದುಳಿವರೆ ಮರುಗಲೇಕಿನ್ನು

ಮೃತ್ಯು ಬೆನ್ನಿನೊಳಿಹುದು ತಾವಿ

ನ್ನತ್ತು ಮಾಡುವುದೇನು ಪೂರ್ವದ

ತೆತ್ತಿಗನು ನೀನೀಗ ರಕ್ಷಿಸು ನಮ್ಮನನವರತ"–ಎನ್ನುವರು. ಈ ಲೋಕದಾಟದ ಮರ್ಮಗಳನ್ನು ಎಳೆ ಎಳೆಯಾಗಿ ಬಿಚ್ಚಿ ತೋರಿಸಿದ್ದಾರೆ. ದುಃಖ ದುಮ್ಮಾನಗಳಿಂದ ಹೊರಬರುವ ದಾರಿಯನ್ನು ತೋರಿದ್ದಾರೆ. ಮಡಿ–ಮೈಲಿಗೆಂದು ಹಾರಾಡುವ ಜನರಿಗೆ ತನ್ನ ದೇಹದೊಳಗೆ ಇರುವ ಮೈಲಿಗೆಯನ್ನೆಲ್ಲ ಹೇಳಿ, ಇಂಥ ದೇಹದೊಳಗಿರುವ ಶ್ರೀಹರಿಗೆ ಹೊಲೆಯುಂಟೇ ಎಂದು ಪ್ರಶ್ನಿಸುವ ಮೂಲಕ ಸಾಮಾನ್ಯ ಜನರು ತಾವು ಕೀಳೆಂದು, ಹೀನಕುಲದವರೆಂದು ಜಿಗುಪ್ಸೆ ಪಡುತ್ತಿರುವವರಿಗೆ, ನೀನು ಕೀಳಲ್ಲ, ಹೀನನಲ್ಲ ಎಂದು ಧೈರ್ಯ ತುಂಬಿ, ಹರಿಯ ಸ್ಮರಣೆಯತ್ತ ಸಾಗಲು ಪ್ರೇರೇಪಿಸಿದ್ದಾರೆ. ಅಷ್ಟೆ ಅಲ್ಲದೆ ವೇದ, ಪುರಾಣ, ಶಾಸ್ತ್ರ ಓದಿದವರು ಅಹಂಕಾರದಲ್ಲಿ ಮೆರೆದರೆ ಏನು ಪ್ರಯೋಜನವಿಲ್ಲ. ದುಷ್ಕರ್ಮದಲ್ಲಿ ಮಾಡಿದ ಕೇಡು, ದುಃಖವು ಕಳೆದು ಹೋಗಲು ಶ್ರೀಹರಿಯ ನಾಮಸ್ಮರಣೆಯೊಂದೇ ಸಾಕು ಎಂಬ ಸರಳ ಸುಲಭವಾದ ಮಾರ್ಗವನ್ನು ತೋರಿಸಿರುವ ಮಹಾತ್ಮ ಕನಕದಾಸರು.

ಅವರದು ದೃಷ್ಟಿ ಎಲ್ಲಿದ್ದರೂ ತಾನು ಹುಟ್ಟಿ ಬಂದ ನೆಲದ ಕಡೆ, ಸಮೂಹದ ಕಡೆ, ಸಾಮಾನ್ಯ ಜನರಿಗೆ, ಅನಕ್ಷರಸ್ಥರಿಗೆ, ಅಜ್ಞಾನಿಗಳಿಗೆ, ಕೀಳು ಕೀಳೆಂದು ಪರಿತಪಿಸುವವರ ಕಡೆ ನಿಡಿದಾದ ನೋಟ ಬೀರಿ ಹರಿಯ ಒಲುಮೆಗೆ ಪಾತ್ರರಾಗಲು ಕಠಿಣ ವ್ರತ ನಿಯಮ, ಅಧ್ಯಯನ, ಕಾಡುಮೇಡು ಅಲೆದು ತಪಸ್ಸು ಮಾಡಲೇಬೇಕಿಲ್ಲ. ನಿತ್ಯ ನಿರಂತರ ಹರಿಯ ನಾಮಸ್ಮರಣೆಯಿಂದ ಸಕಲ ಸೌಭಾಗ್ಯ ಪಡೆಯಬಹುದು. ಮುಕ್ತಿ ಪಡೆಯಬಹುದೆಂಬ ಭರವಸೆ ನೀಡಿ, ಬದುಕುವ ದಾರಿ ತೋರಿಸಿದ ಪುಣ್ಯಪುರುಷರು.

# ಅಧ್ಯಾಯ–5

## ಉಪಸಂಹಾರ:

"ನೀ ಮಾಯೆಯೊಳಗೊ ನಿನ್ನೊಳು ಮಾಯೆಯೋ। ನೀ ದೇಹದೊಳಗೋ ನಿನ್ನೊಳು ದೇಹವೋ ಹರಿಯೆ"ಎಂಬ ಕೀರ್ತನೆಯಲ್ಲಿ ಅನುಮಾನದ ಪ್ರಶ್ನೆಗಳನ್ನೆತ್ತುವ ಮೂಲಕ ಬಯಲಯ–ಆಲಯ, ನಯನ–ಬುದ್ಧಿ, ಸವಿ–ಸಕ್ಕರೆ ಜಿಹ್ವೆ–ಮನಸ್ಸು, ಕುಸುಮ–ಗಂಧ–ಇವುಗಳ ಪರಸ್ಪರ ಸಂಬಂಧ ಇವುಗಳಿಗೆಲ್ಲ ಕಾರಣಕರ್ತನಾದ ನಿನ್ನೊಳಗೊ ಎಂಬ ದೈನ್ಯದ ಭಾವವನ್ನು ಬಿತ್ತಿ ಬೆಳೆದಿರುವ ಭಕ್ತ ಕನಕದಾಸರು "ಮುತ್ತು ಬಂದಿದೆ ಕೇರಿಗೆ। ಭಕ್ತಿಯುಳ್ಳರೆಲ್ಲ ಕಟ್ಟಿಕೊಳ್ಳಿ ಸೆರಗಿನಲ್ಲಿ" ಎಂದು ಕೂಗಿ ಕರೆಯುವುದರಲ್ಲಿಯೇ ಇವರ ಲೋಕದೃಷ್ಟಿ ಅಡಗಿದೆ. ಕೇರಿ ಕೇರಿಯ ಜನರಲ್ಲಿನ ಅಜ್ಞಾನ, ಅಂಧಾನುಕರಣೆಗಳನ್ನು ಅವೈಚಾರಿಕತೆಯನ್ನು ಹೋಗಲಾಡಿಸಿ, ಭಕ್ತಿಪಥದಲ್ಲಿ ಮುಕ್ತಿ ಮಾರ್ಗ ತೋರಿಸುವುದು ಕನಕದಾಸರ ಲೋಕದೃಷ್ಟಿಯಾಗಿದೆ.

"ಎಲ್ಲರು ಮಾಡುವುದು ಹೊಟ್ಟೆಗಾಗಿ।ಗೇಣು ಬಟ್ಟೆಗಾಗಿ" ಎಂಬ ಕೀರ್ತನೆಯಲ್ಲಿ ಕೂಲಿಗಳು, ಜ್ಯೋತಿಷಿಗಳು, ಕಾರ್ಮಿಕರು, ಸೈನಿಕರು, ರೈತರು, ಕಳ್ಳರು, ಸನ್ಯಾಸಿ, ಜಂಗಮ, ಜೋಗಿ ಜಟ್ಟಿ, ಬೈರಾಗಿ ಮೊದಲಾದವರೆಲ್ಲ ನಾನಾವೇಷ ತೊಟ್ಟ ನಾನಾ ಕಾರ್ಯ ಮಾಡುವುದು ಗೇಣು ಹೊಟ್ಟೆ–ಬಟ್ಟೆಗಾಗಿ ಎಂದು ಹೇಳುವ ಕನಕದಾಸರಲ್ಲಿ ಆಯಾಯ ಕರ್ಮಿಗಳಿಗೆ ಅನುಸಾರವಾಗಿ ಅನುಕಂಪ, ಕೋಪ ಅಸಹನೆ, ವಿರೋಧಗಳಿವೆ. ಇವರಿಗೆಲ್ಲ ಸೂಚಿಸುವ ಒಂದೇ ಒಂದು ಸರಳ ಮಾರ್ಗ ಯಾವುದೆಂದರೆ ಕಾಗಿನೆಲೆಯಾದಿಕೇಶವನನ್ನು ಅನು ದಿನವು ನೆನೆದು ಮುಕ್ತಿ ಪಡೆಯುವುದಾಗಿದೆ.

ಜಾನಪದದ ಲಯ ವಿನ್ಯಾಸದಲ್ಲಿ ಹೆಣೆದಿರುವ ಇವರ ಕೀರ್ತನೆ, ಕಾವ್ಯಗಳು ಹಾಡುಗಬ್ಬವಾಗಿ ಹೃನ್ಮನದ ಪರಿವರ್ತನೆಗೆ, ಹರಿಯ ನಾಮಸ್ಮರಣೆಗೆ, ಸತ್ಕಾರ್ಯಗಳ ನಿರ್ವಹಣೆಗೆ, ಸಾಧು ಸಜ್ಜನರ ಸಂರಕ್ಷಣೆಗೆ, ಮಡಿವಂತರ ಮನಪರಿವರ್ತನೆಗೆ, ಕೀಳರಿಮೆಯ ನಾಶಕ್ಕೆ, ನಾಸ್ತಿಕತೆಯ ನಾಶಕ್ಕೆ, ಆಸ್ತಿಕತೆಯ ಸಂವರ್ಧನೆಗೆ, ಪರಿಶುದ್ಧ ಪ್ರೇಮದಾಂಕುರಕ್ಕೆ, ಸುಖಿದಾಂಪತ್ಯಕ್ಕೆ, ಮಾನವೀಯ ಸಂಬಂಧಗಳ ವರ್ಧನೆಗೆ, ಮಾಲಿನ್ಯಮತಿಯ ನಿರ್ಮೂಲನೆಗೆ, ಮನುಕುಲದ ಸಾಮರಸ್ಯದ ಬೆಸುಗೆಗೆ ಸ್ಫೂರ್ತಿಯ ಸೆಲೆಯಾಗಿವೆ. ಇದುವೆ ಕನಕದಾಸರು ನೀಡಿದ ಲೋಕದೃಷ್ಟಿ, ಕನಕದಾಸರ ಕನಸಿನ ಲೋಕದೊಳಗೆ ಭಿನ್ನಭೇದವಿಲ್ಲ. ಹರಿಯೇ ಸರ್ವೋತ್ತಮನಲ್ಲಿ. ಆತನ ಸ್ಮರಣೆಯಲ್ಲಿ ಕಾಯ ಸವೆಸುವುದರಿಂದ ನಿಜಮುಕ್ತಿ ಲಭ್ಯ. ಅಂಥ ಕನಸಿನ ಲೋಕ ನನಸಾಗಬೇಕು.

'ಕನಕನನ್ನು ಕೆಣಕಬೇಡ, ಕೆಣಕಿ ತಿಣುಕಬೇಡ', 'ಕನಕನ ತಾಳಾಗು, ಇಲ್ಲದಿದ್ದರೆ ಹಾಳಾಗು', 'ಕಂಡ ಕಂಡಂತೆ ಹೇಳಾಕ ಕನಕದಾಸನೇನು?– ಎಂಬಂಥ ಗಾದೆಗಳು ಕನಕದಾಸರು ಜನಮಾನಸದಲ್ಲಿ ನೆಲೆಯಾಗಿದ್ದನ್ನು ಸೂಚಿಸುತ್ತವೆ.

ಕಲಿಯಾಗಿ, ಶೂದ್ರನಾಗಿ, ಕವಿಯಾಗಿ, ಸಂತನಾಗಿ, ಭಕ್ತನಾಗಿ, ಕೀರ್ತನಕಾರನಾಗಿ, ಹರಿದಾಸನಾಗಿ ಬೀದಿ ಬೀದಿ ಕೇರಿ ಕೇರಿ ಅಲೆದು, ಪಂಡಿತ ಪಾಮರರನ್ನು ಬಲ್ಲವರಾಗಿ, ಮಠಮಂದಿರಗಳಿಗೆ ಅಲೆದಾಡಿ, ಗುರು–ಶಿಷ್ಯರ ಸಮೂಹದೊಳಗೆ ಬೆರೆತವರಾಗಿರುವ ಕನಕದಾಸರ ಸಂವೇದನೆಗಳಿಗೆ ಹಿಡಿದ ರನ್ನಗನ್ನಡಿಯಾಗಿದೆ ಅವರ ಬರಹ. ಇದರೊಳಗಿನ ಅವರ ಲೋಕದೃಷ್ಟಿ ತೆರೆದ ಮುಸ್ತಕದಂತೆಯಿದೆ.

@@@@@@@@@@@@@@@@@@@@@@@@@@@@@@@@@@@

**ಅಡಿಟಿಪ್ಪಣಿ:**

1. ಡಾ.ಬಿ. ರಾಜಶೇಖರಪ್ಪ–ಇತಿಹಾಸಕಥನ ಪುಟ ಸಂ–267
2. ಸಂ.ಡಾ. ದೇ ಜವರೇಗೌಡ–ಕನಕಸಾಹಿತ್ಯ ದರ್ಶನ–ಸಂ–1ಮಟಸಂ–07
3. ಸಂ:ಎನ್.ಬಸವರಾಧ್ಯ–ಕನ್ನಡಕನ್ನಡನಿಘಂಟು–ಸಂ:–7,ಪುಸಂ–7732–7733
4. ಹಿ.ಚಿ. ಬೋರಲಿಂಗಯ್ಯ –ವಿಸ್ಮೃತಿ ಮತ್ತು ಸಂಸ್ಕೃತಿ– ಪುಟ ಸಂಖ್ಯೆ–05
5. ಅದೇ ಪುಟ ಸಂಖ್ಯೆ–06
6. ಅದೇ ಪುಟ ಸಂಖ್ಯೆ–14
7. ಕೆ.ಜಿ. ನಾಗರಾಜಪ್ಪ–ಮರು ಚಿಂತನೆ– ಪುಟಸಂಖ್ಯೆ–93
8. 'ರಾಮಧಾನ್ಯ ಚರಿತ್ರೆ' ಸಮಕಾಲೀನ ಸಂವಾದ– ಕನಕಚಿಂತನ 2009–10 ಪುಟ ಸಂಖ್ಯೆ–49, 51
9. ಮೋಹನ ತರಂಗಿಣಿ–ಗದ್ಯಾನುವಾದ–ಡಾ. ಎನ್.ಎಸ್. ಕೋತಿನ ಪುಟ ಸಂಖ್ಯೆ–10
10. ಡಾ. ನೆಲ್ಲಿಕಟ್ಟೆ ಎಸ್. ಸಿದ್ದೇಶ್–ಅಭಿನವಕಾಳಿದಾಸ ಬಸವಶಾಸ್ತ್ರಿ, ಪುಟ ಸಂಖ್ಯೆ–47

**ಆಧಾರ ಗ್ರಂಥಗಳು:**


1. ಕನ್ನಡ ಸಾಹಿತ್ಯ ದರ್ಶನ– : ಸಂ:1 ಮತ್ತು 2 ಕನ್ನಡ ಸಂಸ್ಕೃತಿ ಇಲಾಖೆ.ಬೆಂ–1990
2. ಸಾವಿರಾರುಕೀರ್ತನೆಗಳು: ಸಂ:ಪ್ರೊ.ಎ.ವಿ.ನಾವಡ,ಡಾ.ಗಾಯತ್ರಿನಾವಡ–ಅಂಕಿತಪುಸ್ತಕ ಬೆಂಗಳೂರು–2002
3. ಈ ಪರಿಯಸೊಬಗು–ಸಂ:ಡಾ ಹೆಚ್.ಎನ್. ಮುರುಳೀಧರ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ–2010
4. ಮೋಹನ ತರಂಗಿಣಿ–ಗದ್ಯನುವಾದ–ಡಾ.ಎಸ್.ಎಸ್. ಕೋತಿನ ಕ.ಸಾ. ಪರಿಷತ್ತು ಬೆಂಗಳೂರು– 1984
5. ಅಭಿನವಕಾಳಿದಾಸ ಬಸವಪ್ಪಶಾಸ್ತ್ರಿ– ಡಾ. ನೆಲ್ಲಿಕಟ್ಟೆ ಎಸ್.ಸಿದ್ದೇಶ್, ಬೆಳಗುಶ್ರೀ ಪ್ರಕಾಶನ– 2008
6. ದಾಸ ಸಾಹಿತ್ಯ ಭಾಷೆ– ಡಾ.ಎಸ್.ಎಸ್. ಅಂಗಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ–2010
7. ಕವಿಕನಕದಾಸರು– ಕಟ್ಟೆ ಶೇಷಾಚಾರ್ಯರು ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–2010
8. ಕನಕಚಿಂತನ– ಸಂ: ಅಕ್ಷಯಶೆಟ್ಟಿ ಮತ್ತು ಇತರರು ಕನಕದಾಸ ಸಂಶೋಧನಾ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ–2010
9. ಕನಕಸಾಹಿತ್ಯ ದರ್ಶನ– ಸಂ:2 ಸಂ: ಡಾ ರಾ.ಶಿ. ಮರುಳಯ್ಯ ಕ.ಸಂ. ಇ. ಬೆಂಗಳೂರು– 1991
10. ವಿಸ್ಮೃತಿ ಮತ್ತು ಸಂಸ್ಕೃತಿ– ಡಾ. ಹಿ.ಚಿ. ಬೋರಲಿಂಗಯ್ಯ ಸಿ.ವಿ.ಜಿ. ಪಬ್ಲಿಕೇಷನ್ ಬೆಂಗಳೂರು–2001
11. ಮರುಚಿಂತನೆ–ಕೆ.ಜಿ. ನಾಗರಾಜಪ್ಪ, ಪ್ರಣತಿ ಪ್ರಕಾಶನ– ತುಮಕೂರು–1985
12. ಇತಿಹಾಸಕಥನ– ಪ್ರೊ.ಬಿ. ರಾಜಶೇಖರಪ್ಪ–ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು–2001